ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಭಾನುವಾರ, ಮಾರ್ಚ್ 03, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 291 RNI : 27369/75

janathavani@mac.com
www.janathavani.com
08192 254736 91642 99999



# ಸಮಾಜ ಘಾತುಕ ಕೃತ್ಯಗಳನ್ನು ತಡೆಯಲು ಯುವಕರು ಜಾಗೃತರಾಗಬೇಕು

**ಯುವ ವಾಗ್ಮಿ ಕು. ಹಾರಿಕಾ ಮಂಜುನಾಥ್ ಕಳಕಳಿ**

ದಾವಣಗೆರೆ, ಮಾ. 2- ಭಾರತ ಇಡೀ ವಿಶ್ವದಲ್ಲೇ ಬಲಿಷ್ಠ ದೇಶವಾಗಲು ನರೇಂದ್ರ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡಲು ಪ್ರತಿಯೊಬ್ಬ ಭಾರತೀಯ ಕಂಕಣ ತೊಡಬೇಕಾಗಿದೆ ಎಂದು ಯುವ ವಾಗ್ಮಿ ಕು. ಹಾರಿಕಾ ಮಂಜುನಾಥ್ ಆಶಿಸಿದರು.

ನಗರದ ಆಂಜನೇಯ ಬಡಾವಣೆಯ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ನರೇಂದ್ರ ಮೋದಿ ಅಭಿಮಾನಿ ಬಳಗದಿಂದ ಇಂದು ಸಂಜೆ ಆಯೋಜಿಸಿದ್ದ 'ಯುವಕರ ನಡೆ ಮೋದಿ ಕಡೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ದಿಕ್ಸೂಚಿ ಭಾಷಣ ಮಾಡಿದರು.

ಶತಮಾನದ ಹಿಂದೆಯೇ ಸ್ವಾಮಿ ವಿವೇಕಾನಂದರು ದೇಶ ಜಾಗೃತಿಗೊಳಿಸುವ ಕೆಲಸ ಮಾಡಿದ್ದರು. ಇದೀಗ ನರೇಂದ್ರ ಮೋದಿಯವರು ಸದೃಢ ಭಾರತ ನಿರ್ಮಾಣ ಮಾಡುವ ಆಶಯ ಹೊಂದಿದ್ದಾರೆ ಎಂದರು.

ಸಮಾಜ ಘಾತುಕ ಶಕ್ತಿಗಳು 2047 ರ ವೇಳೆಗೆ ಭಾರತವನ್ನು ಇಸ್ಲಾಮೀಕರಣ ಮಾಡುವುದಾಗಿ ಘೋಷಿಸಿವೆ. ಇಂತಹ ಸಮಾಜ ಘಾತುಕ ಕೃತ್ಯಗಳನ್ನು ತಡೆಯಲು ಭಾರತದ ಯುವಕರು ಜಾಗೃತರಾಗಬೇಕಿದೆ. ಸಂವಿಧಾನದ ಅಡಿಯಲ್ಲಿ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡಲು ಮೋದಿಯವರ ಕೈ ಬಲಪಡಿಸಬೇಕಾಗಿದೆ ಎಂದು ಹೇಳಿದರು.

ದುಷ್ಟಶಕ್ತಿಗಳಿಂದ ದೇಶ ರಕ್ಷಿಸಲು ಮತ್ತು ಭಾರತವನ್ನು ಹಿಂದೂ ರಾಷ್ಟ್ರವೆಂದು ಘೋಷಿಸಲು ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಅಧಿಕಾರದ ಗದ್ದುಗೆ ಏರಲು ಅವಕಾಶ ನೀಡಬೇಕಾಗಿದೆ ಎಂದರು.

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಚುನಾವಣಾ ಪ್ರಣಾಳಿಕೆಯಲ್ಲಿನ 'ರಾಮ ಮಂದಿರ' ನಿರ್ಮಾಣದ ಭರವಸೆಯನ್ನು ಈಡೇರಿಸಿದೆ. ಇದರ ಪ್ರತಿಫಲ ಬಿಜೆಪಿಗೆ ಸಲ್ಲಬೇಕು. ನಮ್ಮ ಮುಂದಿನ ಗುರಿ ಕಾಶಿ ವಿಶ್ವನಾಥ, ಮಥುರಾದಲ್ಲಿ ಶ್ರೀಕೃಷ್ಣ ದೇಗುಲ ನಿರ್ಮಾಣ. ಹಿಂದೂ ಸಮಾಜ ನಿರ್ಮಾಣಕ್ಕೆ ಯುವಕರಲ್ಲಿ ಹನುಮ ಬಲ ಅಗತ್ಯ ಎಂದು ಹೇಳಿದರು.

ಒಳ್ಳೆಯ ಮುಸಲ್ಮಾನರು, ಒಳ್ಳೆಯ ಕ್ರಿಶ್ಚಿಯನ್ನರಾಗಬೇಕು. ಆದರೆ ಹಿಂದೂಗಳು ಮಾತ್ರ ಜಾತ್ಯತೀತರಾಗಬೇಕೆಂದು ಹೇಳುತ್ತಾರೆ. ಇದು ಬೂಟಾಟಿಕೆಯ ಹೇಳಿಕೆಯಾಗಿದೆ. ಬುದ್ಧಿಜೀವಿಗಳೆಂದು ಎನಿಸಿಕೊಳ್ಳುವವರು ಹಿಂದೂ ಸಮಾಜವನ್ನು ಒಡೆಯಲೆತ್ನಿಸುತ್ತಿದ್ದಾರೆ. ಹಿಂದೂಗಳು ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ ಎಂದರು.

ರಾಮ ಮಂದಿರ ನಿರ್ಮಾಣಕ್ಕೆ ವಿರೋಧ ಮಾಡುತ್ತಿರುವ ಕಾಂಗ್ರೆಸ್ (2ನೇ ಪುಟಕ್ಕೆ)

# ಬಿಜೆಪಿ ಅಭ್ಯರ್ಥಿಗಳ ಹೆಸರು ಪ್ರಕಟ



**ಮೂರನೇ ಬಾರಿ ವಾರಣಾಸಿಯಿಂದ ಮೋದಿ ಸ್ಪರ್ಧೆ**

ನವದೆಹಲಿ, ಮಾ. 2 – ಮುಂಬರುವ ಲೋಕಸಭಾ ಚುನಾವಣೆಗಾಗಿ ಬಿಜೆಪಿ 195 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 3ನೇ ಬಾರಿ ವಾರಣಾಸಿಯಿಂದ ಸ್ಪರ್ಧಿಸಲಿದ್ದಾರೆ.

ಅಮಿತ್ ಷಾ ಹಾಗೂ ರಾಜನಾಥ್ ಸಿಂಗ್ ಸೇರಿದಂತೆ 34 ಕೇಂದ್ರ ಸಚಿವರು ಸ್ಪರ್ಧಿಸಲಿರುವ ಕ್ಷೇತ್ರಗಳನ್ನು ಪ್ರಕಟಿಸಲಾಗಿದೆ. ಅಮಿತ್ ಷಾ ಅವರು ಗಾಂಧಿನಗರ ಹಾಗೂ ರಾಜನಾಥ್ ಸಿಂಗ್ ಲಖ್ನೌದಿಂದ ಸ್ಪರ್ಧಿಸಲಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ಬಿಪ್ಲಬ್ ಕುಮಾರ್ ದೇಬ್ ಅವರೂ ಲೋಕಸಭಾ ಚುನಾವಣೆ ಟಿಕೆಟ್ ಪಡೆದಿದ್ದಾರೆ. ಆದರೆ, ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ ಸೇರಿದಂತೆ ದೆಹಲಿಯ ಹಾಲಿ ನಾಲ್ವರು ಸಂಸದರಿಗೆ ಟಿಕೆಟ್ ದೊರೆತಿಲ್ಲ. ಮಾಜಿ ಸಚಿವರಾದ ಹರ್ಷ ವರ್ಧನ್ ಹಾಗೂ ರಮೇಶ್ ಬಿಧೂರಿ ಅವರಿಗೂ ಟಿಕೆಟ್ ದೊರೆತಿಲ್ಲ.

ಕೇಂದ್ರ ಸಚಿವರಾದ ಜಾನ್ ಬರ್ಲಾ ಹಾಗೂ ರಾಮೇಶ್ವರ್ ತೇಲಿ ಅವರನ್ನೂ ಕೈ ಬಿಡಲಾಗಿದೆ. ಭೂಪಾಲದ ಸಾಧ್ವಿ ಪ್ರಗ್ಯಾ ಠಾಕೂರ್ ಸಹ ಟಿಕೆಟ್ ಪಡೆದಿಲ್ಲ. ಕೇರಳದ ಮಲಪ್ಪುರಂನಿಂದ ಅಬ್ದುಲ್ ಸಲಾಂ ಅವರಿಗೆ ಟಿಕೆಟ್ ನೀಡಲಾಗಿದೆ.

ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ಕೇರಳದ ತಿರುವನಂತಪುರಂನಿಂದ ಸ್ಪರ್ಧಿಸಲಿದ್ದಾರೆ. ಈ ಕ್ಷೇತ್ರವನ್ನು ಮಾಜಿ ಕೇಂದ್ರ ಸಚಿವ ಶಶಿ ಥರೂರ್ ಪ್ರತಿನಿಧಿಸುತ್ತಿದ್ದಾರೆ.

2019ರ ಚುನಾವಣೆಯಲ್ಲಿ ಬಿಜೆಪಿ ಈ 195 ಕ್ಷೇತ್ರಗಳ ಪೈಕಿ 155ರಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿ ಶೇ.20ರಷ್ಟು ಹಾಲಿ ಸಂಸದರಿಗೆ ಟಿಕೆಟ್ ನಿರಾಕರಿಸಲಾಗಿದೆ.

ರಾಜ್ಯಸಭಾ ಸದಸ್ಯರಾಗಿರುವ ಏಳು ಸಚಿವರಿಗೂ ಟಿಕೆಟ್ ನೀಡಿಲ್ಲ. ಅವರು ಲೋಕಸಭೆಯಿಂದ ಸ್ಪರ್ಧಿಸುವ ನಿರೀಕ್ಷೆ ಇದೆ.

ಅಭ್ಯರ್ಥಿಗಳ ವಿವರ ನೀಡಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ, 28 ಮಹಿಳೆಯರು, 50 ವರ್ಷದೊಳಗಿನ 47 ಅಭ್ಯರ್ಥಿಗಳು, ಪರಿಶಿಷ್ಟ ಜಾತಿಯ 27, ಪರಿಶಿಷ್ಟ ಪಂಗಡದ 18 ಹಾಗೂ ಇತರೆ ಹಿಂದುಳಿದ ವರ್ಗಗಳ 57 ಅಭ್ಯರ್ಥಿಗಳು ಟಿಕೆಟ್ ಪಡೆದುಕೊಂಡಿದ್ದಾರೆ ಎಂದರು.

## ಸಾವಿರ ಅಮೃತ್ ಭಾರತ್ ರೈಲುಗಳ ಉತ್ಪಾದನೆ

ನವದೆಹಲಿ, ಮಾ. 3 – ಮುಂಬರುವ ವರ್ಷಗಳಲ್ಲಿ 1,000 ನೂತನ ಪೀಳಿಗೆಯ ಅಮೃತ್ ಭಾರತ್ ರೈಲುಗಳನ್ನು ಉತ್ಪಾದಿಸಲಾಗುವುದು. ರೈಲುಗಳು 250 ಕಿ.ಮೀ. ವೇಗದಲ್ಲಿ ಚಲಿಸುವಂತೆ ಮಾಡುವ ಕಾಮಗಾರಿ ಪ್ರಗತಿಯಲ್ಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ವಂದೇ ಭಾರತ್ ರೈಲುಗಳ ರಫ್ತು ದಿಸೆಯಲ್ಲೂ ಕಾರ್ಯನಿರ್ವಹಿಸಲಾಗುತ್ತಿದೆ. ಮುಂದಿನ ಐದು ವರ್ಷಗಳಲ್ಲಿ ದೇಶ ಮೊದಲ ರಫ್ತು ಕಾಣಲಿದೆ ಎಂದು ಸಚಿವರು ಹೇಳಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ರೈಲ್ವೆ ವಲಯದಲ್ಲಿ ದೊಡ್ಡ ಮಟ್ಟದ ಪ್ರಗತಿಯಾಗಿದೆ. ವಿಶ್ವದಲ್ಲೇ ಅತಿ ದೊಡ್ಡ ರೈಲ್ವೆ ಸೇತುವೆಯಾದ ಚಿನಾಬ್ ಸೇತುವೆ ನಿರ್ಮಿಸಲಾಗಿದೆ. ಕೊಲ್ಕೊತಾ ಮೆಟ್ರೋಗೆ ಮೊದಲ ನದಿ ತಳದ ಸುರಂಗ ನಿರ್ಮಿಸಲಾಗಿದೆ. ಇದು ರೈಲ್ವೆ ವಲಯದಲ್ಲಿ ಆಗಿರುವ ಬೆಳವಣಿಗೆಯನ್ನು ತೋರಿಸುತ್ತದೆ ಎಂದು ವೈಷ್ಣವ್ ಹೇಳಿದ್ದಾರೆ.

ಅಮೃತ್ ಭಾರತ್ ರೈಲನ್ನು ವಿಶ್ವ ದರ್ಜೆಯಲ್ಲಿ ನಿರ್ಮಿಸಲಾಗಿದೆ. ಇದು ಕೇವಲ 454 (4ನೇ ಪುಟಕ್ಕೆ)

## ಪ್ಲೇ ಸ್ಟೋರ್‌ನಿಂದ ಭಾರತೀಯ ಆಪ್‌ಗಳ ಕೈ ಬಿಡಲು ಅವಕಾಶ ನೀಡಲ್ಲ : ಕೇಂದ್ರ

ನವದೆಹಲಿ, ಮಾ. 2 – ಭಾರತದ ಆಪ್‌ಗಳನ್ನು ಗೂಗಲ್ ತನ್ನ ಪ್ಲೇಸ್ಟೋರ್‌ನಿಂದ ಕೈ ಬಿಡಲು ಅವಕಾಶ ನೀಡುವುದಿಲ್ಲ. ಟೆಕ್ ಕಂಪನಿ ಹಾಗೂ ನವೋದ್ಯಮಗಳ ನಡುವಿನ ವಿಷಯದ ಬಗ್ಗೆ ಮುಂದಿನ ವಾರ ಚರ್ಚಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಬಗ್ಗೆ ಖಾಸಗಿ ಸುದ್ದಿ ಸಂಸ್ಥೆಯೊಂದಕ್ಕೆ ಸಂದರ್ಶನ ನೀಡಿರುವ ಕೇಂದ್ರ ಐ.ಟಿ. ಹಾಗೂ ಟೆಲಿಕಾಂ ಸಚಿವ ಅಶ್ವಿನಿ ವೈಷ್ಣವ್, ಭಾರತದ ನವೋದ್ಯಮ ವ್ಯವಸ್ಥೆಯು ಆರ್ಥಿಕತೆಗೆ ಮಹತ್ವದ್ದಾಗಿದೆ. ಈ ವಿಷಯವನ್ನು ಯಾವುದೇ ದೊಡ್ಡ ಟೆಕ್ ಕಂಪನಿ ನಿರ್ಧಾರಕ್ಕೆ ಬಿಡಲಾಗದು ಎಂದಿದ್ದಾರೆ. ಜನಪ್ರಿಯ ವೈವಾಹಿಕ ಆಪ್‌ಗಳೂ ಸೇರಿದಂತೆ ಹಲವಾರು ಆಪ್‌ಗಳನ್ನು ಕೈ ಬಿಡುವ ಪ್ರಕ್ರಿಯೆಗೆ ಗೂಗಲ್ ಶುಕ್ರವಾರ ಮುಂದಾಗಿತ್ತು. ಸೇವಾ ಶುಲ್ಕ ನೀಡುವುದಕ್ಕೆ ಸಂಬಂಧಿಸಿದಂತೆ ವಿವಾದ ಉಂಟಾಗಿತ್ತು. ಗೂಗಲ್ ಕ್ರಮಕ್ಕೆ ಆಪ್‌ಗಳು ಹಾಗೂ ನವೋದ್ಯಮದವರು ಆಕ್ಷೇಪಿಸಿದ್ದರು.

**ಪ್ಲೇ ಸ್ಟೋರ್‌ಗೆ ಭಾರತೀಯ ಆಪ್‌ಗಳ ಮರು ಸೇರ್ಪಡೆ :**

ಭಾರತದ ಆಪ್‌ಗಳನ್ನು ಪ್ಲೇ ಸ್ಟೋರ್‌ನಿಂದ ತೆಗೆದು ಹಾಕದಂತೆ ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದ ನಂತರ, ಹಲವಾರು ಆಪ್‌ಗಳನ್ನು ಮತ್ತೆ ಪ್ಲೇ ಸ್ಟೋರ್‌ನಲ್ಲಿ ಸೇರ್ಪಡೆ ಮಾಡಲಾಗಿದೆ. ಆದರೆ, ಈ ಆಪ್‌ಗಳ ಮರು ಸೇರ್ಪಡೆಗೂ ಸರ್ಕಾರದ ಸೂಚನೆಗೂ ಸಂಬಂಧವಿಲ್ಲ. ಗೂಗಲ್ ಪ್ಲೇ ಸ್ಟೋರ್‌ನ ನೀತಿಗಳ ಅನ್ವಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

## ಮಾ.6ರಂದು ದೇಶದ ಮೊದಲ ನದಿ ಮೆಟ್ರೋ ಸುರಂಗ ಉದ್ಘಾಟನೆ

ನವದೆಹಲಿ, ಮಾ. 2 – ದೇಶದ ಮೊದಲ ನದಿ ತಳದ ಮೆಟ್ರೋ ಸುರಂಗವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾರ್ಚ್ 6ರಂದು ಉದ್ಘಾಟಿಸಲಿದ್ದಾರೆ. ಕೊಲ್ಕೊತಾದಲ್ಲಿ ಈ ಮೆಟ್ರೋ ಸುರಂಗ ನಿರ್ಮಿಸಲಾಗಿದೆ.

ಈ ಬಗ್ಗೆ ಮಾಹಿತಿ ನೀಡಿರುವ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, 1970ರಲ್ಲಿ ಕೊಲ್ಕೊತಾ ಮೆಟ್ರೋ ಕಾಮಗಾರಿ ಆರಂಭಿಸಲಾಗಿತ್ತು. ಆದರೆ, ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಕಳೆದ ಹತ್ತು ವರ್ಷಗಳಲ್ಲಿ ಕಾಮಗಾರಿಯಲ್ಲಿ ಪ್ರಗತಿಯಾಗಿದೆ ಎಂದರು.

ಹಲವು ಹಂತಗಳಲ್ಲಿ ಕೊಲ್ಕೊತಾ ಮೆಟ್ರೋ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಈಗಿರುವ ಹಂತದಲ್ಲಿ ಪೂರ್ವ – ಪಶ್ಚಿಮ ಮೆಟ್ರೋ ಕಾರಿಡಾರ್‌ನಲ್ಲಿ ನದಿ ತಳದ ಸುರಂಗ ನಿರ್ಮಿಸಲಾಗಿದೆ.

## ಕೃತಕ ಬುದ್ಧಿವಂತಿಕೆ : ಮಾಹಿತಿ ನೀಡಲು ಕೇಂದ್ರದ ಸೂಚನೆ

ನವದೆಹಲಿ, ಮಾ. 2 – ಸಾಮಾಜಿಕ ಜಾಲತಾಣಗಳು ಹಾಗೂ ಇತರೆ ವೇದಿಕೆಗಳು ಪ್ರಯೋಗದ ಹಂತದಲ್ಲಿರುವ ಕೃತಕ ಬುದ್ಧಿವಂತಿಕೆಯ ಬಳಕೆಯ ಕುರಿತು ಗ್ರಾಹಕರಿಗೆ ತಿಳಿಸಬೇಕು. ಅಕ್ರಮ ಮಾಹಿತಿಯನ್ನು ಪ್ರಕಟಿಸಬಾರದು ಎಂದು ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಗೂಗಲ್‌ನ ಎ.ಐ. ತಂತ್ರಾಂಶವು ಇತ್ತೀಚೆಗೆ ತೀವ್ರ ವಿವಾದಕ್ಕೆ ಗುರಿಯಾದ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ.

ಮಾರ್ಚ್ 1ರಂದು ಈ ಬಗ್ಗೆ ಪ್ರಕಟಣೆ ಹೊರಡಿಸಿರುವ ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯ, ತನ್ನ ಸೂಚನೆಗಳನ್ನು ಪಾಲಿಸದೇ ಇದ್ದರೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಸಿದೆ.

ಗೂಗಲ್‌ನ ಜೆಮಿನಿ ಎ.ಐ. ತಂತ್ರಾಂಶವು ನೀಡಿದ ಕೆಲ ಮಾಹಿತಿಗಳ ಬಗ್ಗೆ ಆಕ್ಷೇಪ ವ್ಯಕ್ತವಾಗಿತ್ತು. ನಂತರ ಜೆಮಿನಿಯು ಚಿತ್ರ ರೂಪಿಸುವುದನ್ನು ನಿಲ್ಲಿಸಲಾಗಿತ್ತು.

## ಪಾಕ್‌ಗೆ ಅಣು ಸರಕು ಪೂರೈಸುತ್ತಿದ್ದ ಹಡಗಿಗೆ ತಡೆ

ಮುಂಬೈ, ಮಾ. 2 – ಪಾಕಿಸ್ತಾನದ ಅಣು ಹಾಗೂ ಕ್ಷಿಪಣಿ ಯೋಜನೆಗೆ ಸರಕು ಪೂರೈಸುತ್ತಿದ್ದ ಹಡಗೊಂದನ್ನು ಮುಂಬೈನ ನವಶೇವ ಬಂದರಿನಲ್ಲಿ ತಡೆಯಲಾಗಿದೆ. ಈ ಚೀನಾದಿಂದ ಪಾಕಿಸ್ತಾನಕ್ಕೆ ತೆರಳುತ್ತಿದ್ದ ಈ ಹಡಗನ್ನು ಭದ್ರತಾ ಸಂಸ್ಥೆಗಳು ತಡೆದಿವೆ.

ಗುಪ್ತಚರ ಮಾಹಿತಿ ಪಡೆದಿದ್ದ ಸುಂಕಾಧಿಕಾರಿಗಳು, ಮಾಲ್ಟಾದ ಧ್ವಜ ಹೊಂದಿದ್ದ ವ್ಯಾಪಾರಿ ಹಡಗಾದ ಸಿ.ಎಂ.ಎ. ಸಿ.ಜಿ.ಎಂ. ಅಟ್ಟಿಲಾ ಅನ್ನು ತಡೆದಿದ್ದಾರೆ. ಇದು ಕರಾಚಿಗೆ ತೆರಳುತ್ತಿತ್ತು.

ಇದರಲ್ಲಿರುವ ಸರಕುಗಳನ್ನು ರಕ್ಷಣಾ ಸಂಶೋಧನಾ ಸಂಸ್ಥೆಯಾದ ಡಿ.ಆರ್.ಡಿ.ಒ. ಪರಿಶೀಲಿಸಿದೆ. ಇವುಗಳನ್ನು ಪಾಕಿಸ್ತಾನದ ಅಣು ಉದ್ದೇಶ ಹಾಗೂ ಕ್ಷಿಪಣಿ ಅಭಿವೃದ್ಧಿಗೆ (4ನೇ ಪುಟಕ್ಕೆ)

## ಅಚ್ಚುಕಟ್ಟು ಕೊನೆ ಭಾಗಕ್ಕೆ ನೀರು ಹರಿಸಿ, ಇಲ್ಲವೇ ರೈತರ ನಷ್ಟ ಭರಿಸಿ



ದಾವಣಗೆರೆ, ಮಾ.2- ಅಚ್ಚುಕಟ್ಟು ಪ್ರದೇಶದ ಕೊನೆಯ ಭಾಗದ ರೈತರಿಗಾಗುವ ಆರ್ಥಿಕ ನಷ್ಟವನ್ನು ರಾಜ್ಯ ಸರ್ಕಾರವೇ ಭರಿಸಬೇಕು ಎಂದು ಹರಿಹರ ಶಾಸಕ ಬಿ.ಪಿ. ಹರೀಶ್ ಒತ್ತಾಯಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭದ್ರಾ ಜಲಾಶಯದಿಂದ ಕನಿಷ್ಟ 20ದಿನ ನೀರು ಹರಿಸಲು ಕ್ರಮವಹಿಸಬೇಕು ಇಲ್ಲವೇ ರೈತರಿಗಾದ ನಷ್ಟ ಭರಿಸಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವರು ನಾಲೆಗಳಿಗೆ ಸಮರ್ಪಕವಾಗಿ ನೀರು ಹರಿಸಲು ಕ್ರಮ ಕೈಗೊಳ್ಳುವಲ್ಲಿ ನಿರ್ಲಕ್ಷ್ಯವಹಿಸಿದ್ದಾರೆ. ನಾಲೆಯ ಕೊನೆ ಭಾಗದ ರೈತರಿಗೆ ನೀರು ಸಿಗದೆ ಅನ್ಯಾಯವಾಗಿದೆ ಎಂದರು.

ಜಲಾಶಯದಿಂದ ಕೇವಲ 12ದಿನನೀರು ಬಿಟ್ಟರೆ ಕೊನೆ ಭಾಗಕ್ಕೆ ತಲುಪುವುದಿಲ್ಲ. ಮುಂದಿನ ದಿನದಲ್ಲಿ ಇನ್ನೊಂದು ಬಾರಿ ನೀರು ಹರಿಸಲಾಗುತ್ತದೆ ಈ ವೇಳೆಯಾದರೂ ಸಚಿವ ಮಲ್ಲಿಕಾರ್ಜುನ್ ನೀರು ಹರಿಸಲು ಕ್ರಮ ಕೈಗೊಳ್ಳಲಿ ಎಂದರು.

ಉಸ್ತುವಾರಿ ಸಚಿವರು ಸೇರಿದಂತೆ ಕಾಂಗ್ರೆಸ್‌ನ ಎಲ್ಲಾ ಶಾಸಕರು ಅಚ್ಚು ಕಟ್ಟು ಪ್ರದೇಶದ ಕೊನೆಯ ಭಾಗದ ರೈತರ ಹಿತ ಕಾಪಾಡುವಲ್ಲಿ ವಿಫಲರಾಗಿದ್ದಾರೆ ಎಂದು ಹರೀಶ್ ಆರೋಪಿಸಿದರು.

ಭದ್ರಾ ನಾಲೆಗಳಿಗೆ ನೀರು ಹರಿಸುವ ವಿಚಾರವಾಗಿ ಜಿಲ್ಲಾಧಿಕಾರಿಯವರು ರೈತರ ಸಭೆ ಕರೆದಿದ್ದಾರೆ. ಸಭೆಯ ಬಳಿಕ ರೈತರು ಕೈಗೊಳ್ಳುವ ಯಾವುದೇ ಹೋರಾಟಕ್ಕೂ (2ನೇ ಪುಟಕ್ಕೆ)


## 750 ಕೃಷಿ ಅಧಿಕಾರಿ ಹುದ್ದೆಗಳ ಭರ್ತಿ

ಬೆಂಗಳೂರು, ಮಾ. 2 - ಇಲಾಖೆಯಲ್ಲಿ ಖಾಲಿ ಇರುವ 750 ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಎಸ್‌ಸಿ ಮೂಲಕ 100 ಕೃಷಿ ಹಾಗೂ 650 ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆ ಭರ್ತಿ ಮಾಡಲಾಗುವುದು ಎಂದರು.

ನಾಲ್ಕು ಉಪ ಕೃಷಿ ನಿರ್ದೇಶಕರು, 292 ಸಹಾಯಕ ಕೃಷಿ ನಿರ್ದೇಶಕರು, 253 ಕೃಷಿ ಅಧಿಕಾರಿಗಳು, 33 ಸಿಬ್ಬಂದಿ ಗಳು ಸೇರಿದಂತೆ ಒಟ್ಟು 582 ಹುದ್ದೆಗಳಿಗೆ ಮುಂಬಡ್ತಿ ನೀಡಿ ಉತ್ತಮ ಕಾ ರ್ಯನಿರ್ವಹಣೆಗೆ ಪ್ರೋತ್ಸಾಹಿಸಲಾಗಿದೆ ಎಂದು ಹೇಳಿದರು. ಮಳೆಯಾಶ್ರಿತ 24 ಬರ ಪೀಡಿತ (2ನೇ ಪುಟಕ್ಕೆ)

## ಇಂದು ಮೋದಿ ಸರ್ಕಾರದ ಕೊನೆಯ ಮಂತ್ರಿ ಮಂಡಲ ಸಭೆ



ನವದೆಹಲಿ, ಮಾ. 2 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಾಳೆ ಭಾನುವಾರ ಮಂತ್ರಿ ಮಂಡಲದ ಸಭೆ ಕರೆದಿದ್ದಾರೆ. ಲೋಕಸಭಾ ಚುನಾವಣೆಗೆ ಮುಂಚೆ ಇದು ಕೊನೆಯ ಮಂತ್ರಿ ಮಂಡಲ ಸಭೆಯಾಗುವ ಸಾಧ್ಯತೆ ಇದೆ.

ಪ್ರಧಾನಿ ಮೋದಿ ಅವರು (2ನೇ ಪುಟಕ್ಕೆ)

## ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬೆಂಬಲ ಬೆಲೆಗೆ ಕಾನೂನು : ರಾಹುಲ್ ಗಾಂಧಿ

ಭೂಪಾಲ್, ಮಾ. 2 – ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಲ್ಲಿ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಬೆಂಬಲ ನೀಡಲಾಗುವುದು ಹಾಗೂ ಜಾತಿ ಗಣತಿ ನಡೆಸಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಭಾರತ್ ಜೋಡೋ ನ್ಯಾಯ ಯಾತ್ರೆಯಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಜಾತಿ ಗಣತಿ ನಡೆಸಬೇಕು ಎಂಬ ಬೇಡಿಕೆಯನ್ನು ಪುನರುಚ್ಚರಿಸಿದ್ದಾರೆ. ಪಂಜಾಬ್ ಹಾಗೂ ಹರಿಯಾಣದ ಕೆಲ ರೈತ ಸಂಘಟನೆಗಳು ಕನಿಷ್ಠ ಬೆಂಬಲ ಬೆಲೆ ಕಾಯ್ದೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿವೆ.

## ಮಹಾಸಭಾದಿಂದಲೇ ಜಾತಿ ಗಣತಿಗೆ ಯೋಚನೆ: ಎಸ್ಸೆಸ್



ದಾವಣಗೆರೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದಿಂದಲೇ ಜಾತಿ ಗಣತಿ ಮಾಡಲು ಯೋಚಿಸುತ್ತಿದ್ದೇವೆ ಎಂದು ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿರುವ ಅವರು, ನಮ್ಮ ಬಳಿ ಹಣ, ಸಿಬ್ಬಂದಿ ಎಲ್ಲವೂ ಇದೆ. ಯಾವಾಗ ಮಾಡಿಸುತ್ತೇವೆ ಎಂದು ಬರೆದುಕೊಡಲು ಆಗುವುದಿಲ್ಲ. ಜಾತಿಗಣತಿ ಮಾಡುವ ಬಗ್ಗೆ ಪ್ರಯತ್ನಿಸುತ್ತಿದ್ದೇವೆ ಎಂದು ಹೇಳಿದರು.

ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಜಾತಿವಾರು ಜನಗಣತಿ ವರದಿಯನ್ನು ಸ್ವೀಕಾರ ಮಾಡಿದ್ದಾರೆ ಅಷ್ಟೇ. ಅದನ್ನು ಸದನದಲ್ಲಿ ಪಾಸ್ ಮಾಡಿಲ್ಲ. ವರದಿಗೆ ನಮ್ಮ ವಿರೋಧವಂತೂ ಇದ್ದೇ ಇದೆ. ಬಿಡುಗಡೆ ಮಾಡಿದರೆ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ಹತ್ತು ವರ್ಷಗಳ ಹಿಂದಿನ ಕಸದ ಬುಟ್ಟಿಯಲ್ಲಿ ಬಿದ್ದಿದ್ದ ವರದಿಯನ್ನು ಮುಖ್ಯಮಂತ್ರಿಗೆ ನೀಡಲಾಗಿದೆ. ಕಾಂತರಾಜ ಅವರು ವರದಿ ಬರೆದಿದ್ದಾರೋ ಇಲ್ಲ ಕೆ.ಜಯಪ್ರಕಾಶ್ ಹೆಗ್ಡೆ ಅವರು ತಯಾರಿಸಿದ್ದಾರೋ ಗೊತ್ತಿಲ್ಲ. ಲಿಂಗಾಯತರು 2 ಕೋಟಿಯಷ್ಟು ಇದ್ದೇವೆ. ಆದರೆ, ವರದಿಯಲ್ಲಿ ಕಡಿಮೆ ತೋರಿಸಲಾಗಿದೆ. ಒಕ್ಕಲಿಗರು, ಬ್ರಾಹ್ಮಣರು ಲಿಂಗಾಯತರು ಎಲ್ಲಾ ಸೇರಿಕೊಂಡು ಹೋರಾಟ ಮಾಡುತ್ತೇವೆ ಎಂದರು.

**ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಟಿಕೆಟ್ ನೀಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ನಿರ್ಧರಿಸುತ್ತಾರೆ. ಯಾರಿಗೆ ಟಿಕೆಟ್ ಕೊಡುತ್ತಾರೋ ಗೊತ್ತಿಲ್ಲ ಎಂದು ಎಸ್ಸೆಸ್ ಹೇಳಿದರು.**

**ಅಭಿವೃದ್ಧಿ ಕೆಲಸಗಳಿಗೆ ಪ್ರತಿ ಕ್ಷೇತ್ರಕ್ಕೆ ಕಾಂಗ್ರೆಸ್ ಪ್ರತಿ ಶಾಸಕರಿಗೆ 25 ಕೋಟಿ ಅನುದಾನ ನೀಡುವ ಭರವಸೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ. ಲೋಕಸಭಾ ಚುನಾವಣೆ ಅಧಿಸೂಚನೆ ಹೊರಡುವುದಕ್ಕಿಂತ ಮುಂಚೆ ಅವುಗಳಿಗೆ ಟೆಂಡರ್ ಕರೆದು ಭೂಮಿ ಪೂಜೆ ನೆರವೇರಿಸಬೇಕಿದೆ. ಇಲ್ಲದಿದ್ದರೆ ಎರಡ್ಮೂರು ತಿಂಗಳು ಮುಂದೆ ಹೋಗುತ್ತದೆ.**

**- ಎಸ್ಸೆಸ್**

# ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ



ದಾವಣಗೆರೆ, ಮಾ.2- ಇದೇ ದಿನಾಂಕ ದಿನಾಂಕ 18 ಮತ್ತು 19 ರಂದು ಹರಿಹರದ ಸಿದ್ದೇಶ್ವರ ಪ್ಯಾಲೇಸ್‌ನಲ್ಲಿ ಆಯೋಜನೆಗೊಂಡಿರುವ ದಾವಣಗೆರೆ ಜಿಲ್ಲಾ 13ನೇ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ನಗರದ ಶ್ರೀ ಕಲ್ಲೇಶ್ವರ ಅಕ್ಕಿ ಗಿರಣಿ ಆವರಣದಲ್ಲಿನ ತಮ್ಮ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಲ್ಲಿಕಾರ್ಜುನ್ ಅವರು, ಜಿಲ್ಲಾ ಕಸಾಪ ಉತ್ತಮ ಕಾರ್ಯಕ್ರಮ ನಡೆಸುತ್ತಾ ಬಂದಿದೆ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಬಿಡುಗಡೆಗೊಳಿಸುತ್ತಿರುವುದು ಒಂದು ವಿನೂತನ ಪ್ರಯತ್ನ ಹಾಗೂ ಸಂತೋಷದ ಸಂಗತಿ. ಇದಕ್ಕೆ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಹಾಗೂ ಅವರ ತಂಡವನ್ನು ಅಭಿನಂದಿಸುತ್ತೇನೆ. ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನೆರವೇರಲಿ ಎಂದು ಶುಭ ಕೋರಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ಮಾತನಾಡಿ, ಸಮ್ಮೇಳನಕ್ಕೆ ಜಿಲ್ಲಾ ಉಸ್ತುವಾರಿ ಸಚಿವರನ್ನು ಆಹ್ವಾನಿಸುವುದರೊಂದಿಗೆ ಅವರ ಸಹಕಾರವನ್ನು ಕೋರಿದರು. ಜಿಲ್ಲಾ ಕಸಾಪ ಮೊದಲ ಬಾರಿಗೆ ಸಮ್ಮೇಳನದ ಲಾಂಛನವನ್ನು ಬಿಡುಗಡೆಗೊಳಿಸಿದ್ದೇವೆ ಎಂದು ಸಂತಸ ವ್ಯಕ್ತಪಡಿಸಿದರು.

ಗೌರವ ಕಾರ್ಯದರ್ಶಿಗಳಾದ ಬಿ.ದಿಳ್ಳೆಪ್ಪ, ರೇವಣಸಿದ್ದಪ್ಪ ಅಂಗಡಿ, ಸಂಘಟನಾ ಕಾರ್ಯದರ್ಶಿಗಳಾದ ಸಿ.ಜಿ.ಜಗದೀಶ್, ಜಿಗಳಿ ಪ್ರಕಾಶ್, ನಿರ್ದೇಶಕರಾದ ಬಿ.ಎಂ.ಬೈರೇಶ್ವರ, ಎನ್.ಎಸ್.ರಾಜು, ಶ್ರೀಮತಿ ರುದ್ರಾಕ್ಷಿ ಬಾಯಿ, ಎಂ.ಎ.ಸುದರ್ಶನ್, ದಾವಣಗೆರೆ ತಾಲ್ಲೂಕು ಕಸಾಪ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ನಿರ್ದೇಶಕರಾದ ಎ.ಎಂ.ಸಿದ್ದೇಶ್ ಕುರ್ಕಿ, ಹರಿಹರ ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಕಾರ್ಯದರ್ಶಿ ಚಿದಾನಂದ ಕಂಚಿಕೇರಿ, ಜಿ.ಎಸ್.ನಾಗರಾಜ ಕೋಡಿಹಳ್ಳಿ, ಆರ್.ಬಿ.ಮಲ್ಲಿಕಾರ್ಜುನ, ಅಶೋಕ ಸಾಲಕಟ್ಟೆ, ವಾಸುದೇವ ಮೂರ್ತಿ, ಬಸವಂತಪ್ಪ ಎಂ.ಬೇತೂರು ಮುಂತಾದವರು ಉಪಸ್ಥಿತರಿದ್ದರು.


॥ ಶ್ರೀ ಬೀರಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಹೊನ್ನಮ್ಮದೇವಿ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಸಿಟಿ ಹೊಂಡದ ರಸ್ತೆ ವಾಸಿ
ಶ್ರೀಮತಿ, ಶ್ರೀ ಜೆ.ಕೆ. ಕರಿಬಸಪ್ಪ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.
ಆತ್ಮೀಯ ಬಂಧುಗಳೇ,
ದಿನಾಂಕ 24-02-2024ನೇ ಶನಿವಾರ, ಸಂಜೆ 5-35 ಕ್ಕೆ ನನ್ನ ಸಹೋದರನಾದ

**ಶ್ರೀ ಜೋಗಪ್ಪನವರ ಕೊಟ್ರಬಸಪ್ಪ**

ಮಾಜಿ ನಗರ ಸಭಾ ಸದಸ್ಯರು, ಶ್ರೀ ದುರ್ಗಾಂಬಿಕಾ ದೇವಸ್ಥಾನದ ಧರ್ಮದರ್ಶಿಗಳು ಹಾಗೂ ಕಾರ್ಯದರ್ಶಿಗಳು, ಶ್ರೀ ಬೀರಲಿಂಗೇಶ್ವರ ಜಾಗದ ಟ್ರಸ್ಟ್ ಶ್ರೀ ಕ್ಷೇತ್ರ ಐರಣಿ ಹೊಳೆ ಮಠದ ಸೇವಾ ಕರ್ತರು



ಜನನ : 04-03-1949 ಮರಣ : 24-02-2024

ಇವರು ಲಿಂಗೈಕ್ಯರಾದ ಪ್ರಯುಕ್ತ ತತ್ಸಂಬಂಧ 'ಕೈಲಾಸ ಸಮಾರಾಧನೆ' ಯನ್ನು ದಿನಾಂಕ 03-03-2024ನೇ ಭಾನುವಾರ, ಬೆಳಿಗ್ಗೆ 11-30 ಗಂಟೆಗೆ ಶ್ರೀ ಬೀರೇಶ್ವರ ಭವನ, ದೇವರಾಜ ಅರಸ್ ಬಡಾವಣೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಲಕ್ಕಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಜೋಗಪ್ಪನವರ ವಂಶಸ್ಥರು, ತಾಳಿ ವೀರಕೆಂಚಪ್ಪನವರ ವಂಶಸ್ಥರು ಹಾಗೂ ಅಪಾರ ಬಂಧು-ಮಿತ್ರರು. ಮೊ. : 9844353530, 9980344441.

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಭಕ್ತಿಯಿಂದ ಸೇವೆ ಮಾಡಿದರೆ ಸರ್ವ ಸಂಪತ್ತು ಲಭ್ಯ

## ಕೊಟ್ಟೂರು ಪಾದಯಾತ್ರಿಗಳ ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲಿ ಹರಪನಹಳ್ಳಿ ಶಾಸಕರಾದ ಲತಾ

ಹರಪನಹಳ್ಳಿ, ಮಾ. 2. ಭಕ್ತಿಯಿಂದ ಸೇವೆ ಮಾಡಿದರೆ ಭಗವಂತ ಸರ್ವ ಸಂಪತ್ತು, ಉತ್ತಮ ಆರೋಗ್ಯ ದಯಪಾಲಿಸುತ್ತಾನೆ ಎಂದು ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.



ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ಬಿ.ಎಸ್.ಎನ್.ಎಲ್ ನಿವೃತ್ತ ವ್ಯವಸ್ಥಾಪಕ ಸುಧಾಕರ ಕುಟುಂಬದವರು ಕೊಟ್ಟೂರು ಪಾದಯಾತ್ರಿಗಳಿಗೆ ಇಂದು ಏರ್ಪಡಿಸಿದ್ದ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತವು ಅನೇಕ ಸಾಂಸ್ಕೃತಿಕ, ಸಂಪ್ರದಾಯಗಳು ಮತ್ತು ಆಚರಣೆಗಳಿಗೆ ನೆಲೆಯಾಗಿದೆ. ಕೊಟ್ಟೂರು ಬಸವೇಶ್ವರ ರಥೋತ್ಸವದ ಪ್ರಯುಕ್ತ ಇಡೀ ರಾಜ್ಯಾದ್ಯಂತ ಭಕ್ತರು ಭಕ್ತಿ, ತನು, ಮನ, ಧನ ಸಮರ್ಪಣೆಗೆ ಕೊಟ್ಟೂರು ಬಸವೇಶ್ವರ ರಥೋತ್ಸವಕ್ಕೆ ಪಾದಯಾತ್ರೆ ಮೂಲಕ ಬರಿಗಾಲಿನಲ್ಲಿ ನಡೆದುಕೊಂಡು ಬರುತ್ತಿದ್ದಾರೆ. ಪ್ರತಿವರ್ಷ ಬರುವಂತಹ ಪಾದಯಾತ್ರಿಗಳಿಗೆ ಸುಧಾಕರ ಕುಟುಂಬದವರು ಅನ್ನ ಸಂತರ್ಪಣೆ ಮಾಡುತ್ತಿದ್ದಾರೆ. ಭಕ್ತಾದಿಗಳಿಗೆ ಕೊಟ್ಟೂರು ಬಸವೇಶ್ವರ ಸ್ವಾಮಿಯ ಕೃಪಾಶೀರ್ವಾದವಿರಲಿ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಮಾತನಾಡಿ, ಸುಧಾಕರ ಕುಟುಂಬದವರು ಕಳೆದ 16 ವರ್ಷಗಳಿಂದ ಅನ್ನ ಸಂತರ್ಪಣೆ ಮಾಡುತ್ತಿದ್ದಾರೆ. ಅವರಿಗೆ ಕೊಟ್ಟೂರು ಗುರುಬಸವೇಶ್ವರ ಸ್ವಾಮಿ ಒಳ್ಳೆಯದನ್ನು ಮಾಡಲಿ ಎಂದರು.

ದಾನಿ ಸುಧಾಕರ ಮಾತನಾಡಿ, ಸನಾತನ ಧರ್ಮದಲ್ಲಿ ದಾನಕ್ಕೆ ವಿಶೇಷ ಮಹತ್ವವಿದೆ. ಧರ್ಮಗ್ರಂಥಗಳಲ್ಲಿ, ದಾನವನ್ನು ಮಾನವ ಜೀವನದ ಪ್ರಮುಖ ಭಾಗವೆಂದು ಪರಿಗಣಿಸಲಾಗಿದೆ. ದಾನ, ಧರ್ಮ ಮಾಡುವ ವ್ಯಕ್ತಿಗೆ ವರ್ತಮಾನದ ಜೊತೆಗೆ ಮುಂದಿನ ಜನ್ಮದಲ್ಲಿ ಪುಣ್ಯ ಫಲ ಸಿಗುತ್ತದೆ ಎಂಬ ನಂಬಿಕೆ ಇದೆ ಎಂದರು.

ಹರಪನಹಳ್ಳಿ ಪಟ್ಟಣದ ತೆಗ್ಗಿನ ಮಠ, ವಾಸವಿ ಸಮಾಜ, ತಾಲ್ಲೂಕು ವೈದ್ಯಕೀಯ ಸಂಘ, ಕೆಂಪೇಶ್ವರ ಮಠ ಸೇರಿದಂತೆ ಅನೇಕ ಕಡೆಗಳಲ್ಲಿ ಅನ್ನ ಸಂತರ್ಪಣೆ ಹಾಗೂ ವೈದ್ಯಕೀಯ ಸೇವೆ ಮಾಡಲಾಗಿತ್ತು.

ಯುವ ಮುಖಂಡರಾದ ಸಂದೀಪ್, ಪ್ರದೀಪ್, ವಾಸವಿ ಸಮಾಜದ ರಾಘವೇಂದ್ರ ಶೆಟ್ಟಿ, ಮೆಡಿಕಲ್ ಕಿಟ್ಟಣ್ಣ, ಮುದಗಲ್ ಗುರುನಾಥ, ನಟೇಶ, ವಾಸವಿ ಮಹಿಳಾ ಸಮಾಜದ ಅಧ್ಯಕ್ಷೆ ಮುದಗಲ್ ಸುಜಾತ, ಎಚ್.ಬಿ.ಜ್ಯೋತಿ, ಪೆಂಡಕೂರ್ ಸೌಮ್ಯ, ಬಂಕಾಪುರ ಜಯಶ್ರೀ, ಪಿ.ಶ್ವೇತ, ಕೆ.ರಂಜಿನಿ ಮತ್ತಿತರರು ಉಪಸ್ಥಿತರಿದ್ದರು.

# ಜಗಳೂರು : ಸಮ ಸಮಾಜದ ಕನಸು ಕಂಡ ಪವಾಡ ಪುರುಷ ಶ್ರೀ ತಿಪ್ಪೇರುದ್ರಸ್ವಾಮಿ



ಹಿರಿಯ ಸಾಹಿತಿ ಎನ್.ಟಿ. ಎರ್ರಿಸ್ವಾಮಿ ರಚಿಸಿರುವ 'ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಜೀವನ ಚರಿತ್ರೆ ಮತ್ತು ಕ್ಷೇತ್ರ ದರ್ಶನ' ಕೃತಿ ಬಿಡುಗಡೆ ಸಮಾರಂಭದಲ್ಲಿ ಶಾಸಕ ಬಿ. ದೇವೇಂದ್ರಪ್ಪ

ಜಗಳೂರು, ಮಾ.2- ಪಂಚ ಗಣಾಧೀಶರಲ್ಲಿ ಒಬ್ಬರಾದ ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರ ಸ್ವಾಮಿಗಳು ಸಮ ಸಮಾಜದ ಕನಸು ಕಂಡವರಾಗಿದ್ದರು ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ನಾಯಕನಹಟ್ಟಿ ಗ್ರಾಮದ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಸಮುದಾಯ ಭವನದಲ್ಲಿ ಹಿರಿಯ ಸಾಹಿತಿ ಎನ್.ಟಿ. ಎರ್ರಿಸ್ವಾಮಿ ರಚಿಸಿರುವ 'ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಜೀವನ ಚರಿತ್ರೆ ಮತ್ತು ಕ್ಷೇತ್ರ ದರ್ಶನ' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಶ್ರೀ ಗುರು ತಿಪ್ಪೇರುದ್ರಸ್ವಾಮಿ ಅವರು ಕೇವಲ ಧಾರ್ಮಿಕ ಪುರುಷರಾಗಿ ತತ್ವ ಬೋಧನೆಗಳಿಗೆ ಅಷ್ಟೇ ಸೀಮಿತವಾಗದೇ, ಜನರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಬದಲಾವಣೆಗಾಗಿ ಜಾತಿ, ಮತ, ಪಂಥಗಳ ಎಲ್ಲೆ ಮೀರಿ ಪವಾಡದ ರೀತಿಯಲ್ಲಿ ಸಮಾಜಸೇವೆ ಮಾಡಿ ಪವಾಡ ಪುರುಷ ರಾಗಿದ್ದಾರೆ.

ಪವಾಡಗಳು, ಅವರ ವಿಚಾರಧಾರೆಗಳು ಮುಂದಿನ ಯುವ ಪೀಳಿಗೆಗೆ ಮಾರ್ಗದರ್ಶನ ನೀಡಲು ಬದುಕಿಗೆ ಬೆಳಕಾಗುವ ರೀತಿಯಲ್ಲಿ ಲೇಖಕರಾದ ಎರ್ರಿಸ್ವಾಮಿಯವರು ಸಾರ್ಥಕ ಕೆಲಸ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಇತಿಹಾಸ ಓದಬೇಕು ಅಥವಾ ಇತಿಹಾಸ ಬರೆದಿಡುವಂತೆ ಬದುಕಬೇಕು. ಇಲ್ಲವೇ ನಮ್ಮ ಬಗ್ಗೆ ಇತಿಹಾಸ ಆಗುವಂತೆ ಬಾಳಿ ಬದುಕಬೇಕು. ಹಿರಿಯರಾದ ಎನ್.ಟಿ.ಎರ್ರಿಸ್ವಾಮಿಯವರು 26 ಕೃತಿಗಳನ್ನು ಬರೆಯುವ ಮೂಲಕ, ಅವರ ಸಾರ್ಥಕ ಕೆಲಸಗಳು, ಅವರ ಸಾಹಿತ್ಯ ಸೇವೆ ಇತಿಹಾಸದಲ್ಲಿ ಬರೆದಿಡುವಂತೆ ಮಾಡಿದೆ ಎಂದು ಶಾಸಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ತಿಪ್ಪೇರುದ್ರಸ್ವಾಮಿಯವರ ಆಶೀರ್ವಾದದಿಂದಾಗಿ ನನ್ನ ಬದುಕಿನಲ್ಲೂ ಅನೇಕ ಪವಾಡ ಸದೃಶ ರೀತಿಯಲ್ಲಿ ಘಟನೆಗಳಾಗಿವೆ. ಚುನಾವಣೆಯಲ್ಲಿ ಸ್ಪರ್ಧಿಸಿದಾಗ ನಾನು ಶಾಸಕನಾಗಿ ಆಯ್ಕೆ ಆಗುತ್ತೇನೆಂದು ಯಾರಿಗೂ ನಿರೀಕ್ಷೆ ಇರಲಿಲ್ಲ, ಸ್ವತಃ ನನಗೂ ನಂಬಿಕೆ ಇರಲಿಲ್ಲ, ಆದರೆ ಸ್ವಾಮಿಯ ಆಶೀರ್ವಾದದಿಂದ ಪವಾಡ ಸದೃಶ ರೀತಿಯಲ್ಲಿ ನಾನು ಶಾಸಕನಾಗಿ ಆಯ್ಕೆಯಾದೆ. ಚುನಾವಣಾಧಿಕಾರಿ ನೀವು ಆಯ್ಕೆಯಾಗಿದ್ದೀರಿ ಪ್ರಮಾಣ ಪತ್ರ ಸ್ವೀಕರಿಸಿ ಎಂದು ಕರೆಯುವವರೆಗೂ ನಾನು ನಂಬಿರಲಿಲ್ಲ ಎಂದು ಶಾಸಕ ದೇವೇಂದ್ರಪ್ಪ ತಿಳಿಸಿದರು. ನನ್ನ ಬಡತನದ ಕಠಿಣ ದಿನಗಳಲ್ಲಿ ತುತ್ತು ಅನ್ನಕ್ಕಾಗಿ ನಾನು ಕಷ್ಟ ಪಡುತ್ತಿದ್ದ ದಿನಗಳು ಪವಾಡ ಸದೃಶದಲ್ಲಿ ಪರಿಹಾರವಾಗಿವೆ ಎಂದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶ್ ಕುಮಾರ್ ಎಸ್. ಹೊಸಮನಿ ಮಾತನಾಡಿ, ಸಾಹಿತ್ಯ ಕ್ರಾಂತಿಯಿಂದ ಸಾಮಾಜಿಕ ಬದಲಾವಣೆ ಸಾಧ್ಯ. ಪುಸ್ತಕ ಸಂಸ್ಕೃತಿ ಉಳಿಸಬೇಕು. ಕಾಯಕಯೋಗಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಕೃತಿ ಉತ್ತಮ ಕೃತಿಯಾಗಿದ್ದು ರಾಜ್ಯದ ಎಲ್ಲಾ ಗ್ರಂಥಾಲಯಗಳಿಗೂ ತಲುಪಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಲೇಖಕ ಎನ್.ಟಿ. ಎರ್ರಿಸ್ವಾಮಿ ಮಾತನಾಡಿ, ನನ್ನ ಬದುಕಿನಲ್ಲಿ 36 ಕೃತಿಗಳನ್ನು ರಚಿಸಿದ್ದರೂ ಸಹ, ಶ್ರೀ ಗುರು ತಿಪ್ಪೇರುದ್ರಸ್ವಾಮಿ ಜೀವನ ಚರಿತ್ರೆ ಮತ್ತು ಕ್ಷೇತ್ರ ದರ್ಶನ ಪುಸ್ತಕ ನನಗೆ ಅತ್ಯಂತ ಸಂತೃಪ್ತಿ ತಂದು ಕೊಟ್ಟಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಪಟೇಲ್ ಜಿ.ಎಂ. ತಿಪ್ಪೇಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಸಭೆಯ ಸಭಾಪತಿಗಳ ನಿವೃತ್ತ ಆಪ್ತ ಕಾರ್ಯದರ್ಶಿ ಸೊಕ್ಕೆ ತಿಪ್ಪೇಸ್ವಾಮಿ, ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಂ. ಶಿವಸ್ವಾಮಿ, ಶ್ರೀಮಠದ ಕಾರ್ಯನಿರ್ವಾಹಕ ಅಧಿಕಾರಿ ಹೆಚ್. ಗಂಗಾಧರಪ್ಪ , ನಿವೃತ್ತ ಪ್ರಾಂಶುಪಾಲರಾದ ಎಂ. ಬಸವಪ್ಪ ಶಿವಮೊಗ್ಗ, ಚಿತ್ರದುರ್ಗ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದಿನೇಶ್ ಗೌಡಗೆರೆ, ಗೀತಾಂಜಲಿ ಪುಸ್ತಕ ಪ್ರಕಾಶನದ ಜಿ.ಬಿ.ಟಿ. ಮೋಹನ್ ಮುಂತಾದವರು ಉಪಸ್ಥಿತರಿದ್ದರು.

## 750 ಕೃಷಿ ಅಧಿಕಾರಿ ಹುದ್ದೆ ಭರ್ತಿ

**(1ನೇ ಪುಟದಿಂದ)** ಜಿಲ್ಲೆಗಳಲ್ಲಿನ 106 ತಾಲ್ಲೂಕುಗಳಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಪ್ಯಾಕೇಜ್ ಮಾದರಿಯಲ್ಲಿ 100 ಕೋಟಿ ರೂ.ಗಳ ಅನುದಾನದೊಂದಿಗೆ ಸುಮಾರು 10,000 ಕೃಷಿ ಹೊಂಡಗಳನ್ನು ನಿರ್ಮಿಸುವುದರ ಮೂಲಕ ಅನುಷ್ಠಾನ ಮಾಡಲಾಗುತ್ತಿದೆ.

ಸುಮಾರು 2.74ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸೂಕ್ಷ್ಮ ನೀರಾವರಿ ಘಟಕಗಳ ಅಳವಡಿಕೆಗೆ 2.34 ಲಕ್ಷ ಫಲಾನುಭವಿಗಳಿಗೆ 484 ಕೋಟಿ ರೂ. ಸಹಾಯಧನ ನೀಡಲಾಗಿದೆ.

**100 ಕೋಟಿ ರೂ.ಗಳ ಅನುದಾನದೊಂದಿಗೆ ಸುಮಾರು 10,000 ಕೃಷಿ ಹೊಂಡ ನಿರ್ಮಾಣ**

ವಿಶೇಷ ಘಟಕ ಉಪಯೋಜನೆಯಡಿ ಎಲ್ಲಾ ಪರಿಶಿಷ್ಟ ಜಾತಿ ರೈತರಿಗೆ 2 ಹೆಕ್ಟೇರ್ ಪ್ರದೇಶದವರೆಗೆ ಸೂಕ್ಷ್ಮ ನೀರಾವರಿ ಘಟಕಗಳ ಅಳವಡಿಕೆಗೆ ಸಹಾಯಧನ ನೀಡಲಾಗುತ್ತದೆ ಹಾಗೂ ಅರ್ಜಿ ಹಾಕಿದ ಎಲ್ಲಾ ರೈತರಿಗೆ 48 ಗಂಟೆಯೊಳಗೆ ಕಾರ್ಯಾದೇಶ ನೀಡಲಾಗುತ್ತದೆ ಎಂದರು.

ರೈತ ಸಿರಿ ಯೋಜನೆಯಡಿ ಸಿರಿಧಾನ್ಯಗಳ ಉತ್ಪಾದನೆ, ಉತ್ಪಾದಕತೆ ಮತ್ತು ಬಳಕೆ ಹೆಚ್ಚಿಸಲು ಸಿರಿಧಾನ್ಯ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ 10,000 ರೂ.ನಂತೆ ಗರಿಷ್ಠ 2 ಹೆಕ್ಟೇರ್‌ಗಳವರೆಗೆ ಪ್ರೋತ್ಸಾಹಧನ ನೀಡಲಾಗುತ್ತಿದ್ದು, ಇದುವರೆಗೆ 8,521 ರೈತರಿಗೆ 8.56 ಕೋಟಿ ರೂ.ಗಳನ್ನು ಡಿಬಿಟಿ ಮೂಲಕ ಪಾವತಿಸಲಾಗಿದೆ.

ಕೃಷಿ ಕ್ಷೇತ್ರದಲ್ಲಿ ಉದ್ಯಮಶೀಲತೆ ಹೆಚ್ಚಿಸಲು ಹಾಗೂ ಕೃಷಿ ನವೋದ್ಯಮಗಳಿಗೆ ಉತ್ತೇಜನ ನೀಡಲು 10 ಕೋಟಿ ರೂ. ಅನುದಾನ ಒದಗಿಸಲಾಗಿದ್ದು, 48 ನವೋದ್ಯಮಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಹೇಳಿದರು. ರೈತ ಸಮುದಾಯದ ಕಲ್ಯಾಣಕ್ಕಾಗಿ ಇಲಾಖೆ ವತಿಯಿಂದ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಗಳ ಕುರಿತು ರೈತರು ಮಾಹಿತಿ ಪಡೆಯಲು ಅನುಕೂಲವಾಗುವಂತೆ ನೂತನ 'ರೈತ ಕರೆ ಕೇಂದ್ರ'ವನ್ನು 1800-425-3553 ಏಕರೂಪ ಸಂಖ್ಯೆಯೊಂದಿಗೆ ಸ್ಥಾಪಿಸಲಾಗಿದೆ ಎಂದರು.

## ಇಂದು ಮೋದಿ ಸರ್ಕಾರದ ಕೊನೆಯ ಮಂತ್ರಿ ಮಂಡಲ ಸಭೆ

**(1ನೇ ಪುಟದಿಂದ)** ಕಾಲಾನುಕಾಲಕ್ಕೆ ಸಂಪೂರ್ಣ ಮಂತ್ರಿಮಂಡಲದ ಸಭೆ ಕರೆದು ಹಲವಾರು ಪ್ರಮುಖ ನೀತಿಗಳು ಹಾಗೂ ಆಡಳಿತದ ಬಗ್ಗೆ ಚರ್ಚಿಸುತ್ತಾರೆ. ಲೋಕಸಭಾ ಚುನಾವಣೆ ಸನಿಹದಲ್ಲೇ ಇರುವ ಹಿನ್ನೆಲೆಯಲ್ಲಿ ಭಾನುವಾರದ ಸಭೆ ಮಹತ್ವ ಪಡೆದಿದೆ.

ಒಂದೆರಡು ವಾರಗಳಲ್ಲೇ ಚುನಾವಣಾ ಆಯೋಗ ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಿಸುವ ನಿರೀಕ್ಷೆ ಇದೆ.

## ಜುಮ್ಮಾ ಮಸೀದಿಗೆ ನೇಮಕ



ಮಲೇಬೆನ್ನೂರು

ಮಲೇಬೆನ್ನೂರು, ಮಾ.2- ಇಲ್ಲಿನ ಜುಮ್ಮಾ ಮಸೀದಿಯ (ಸುನ್ನಿ) ಆಡಳಿತ ಮತ್ತು ದಾಖಲಾತಿ ಅಧಿಕಾರಿಯನ್ನಾಗಿ ಜಿಲ್ಲಾ ವಕ್ಫ್ ಅಧಿಕಾರಿ ಮೌಜಂ ಪಾಷಾ ಅವರನ್ನು ರಾಜ್ಯ ವಕ್ಫ್ ಮಂಡಳಿ ನೇಮಕ ಮಾಡಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಆದೇಶಿಸಿದ್ದಾರೆ.

ಇದುವರೆಗೆ ಇಲ್ಲಿ ಆಡಳಿತ ಅಧಿಕಾರಿಯಾಗಿದ್ದ ಡಾ. ಸೈಯದ್ ನಿಸಾರ್ ಅಹ್ಮದ್ ಅವರಿಂದ ಅಧಿಕಾರ ವಹಿಸಿಕೊಂಡಿರುವ ಮೌಜಂ ಅವರು, ಜುಮ್ಮಾ ಮಸೀದಿಯ ವಕ್ಫ್ ಸಂಸ್ಥೆಯ ಜನರಲ್ ಬಾಡಿ ಸದಸ್ಯರನ್ನು ನೋಂದಾಯಿಸಲು ನೊಂದಣಿ ಹಾಗೂ ಪಾಲಕರಾಗಿ ವಕ್ಫ್ ನಿಯಮಗಳು 2017ರ ನಿಯಮ 54 (5)ರ ಅಡಿಯಲ್ಲಿ ನೇಮಕಗೊಂಡಿದ್ದಾರೆ. ಅಲ್ಲದೇ, ಜುಮ್ಮಾ ಮಸೀದಿಗೆ (ಸುನ್ನಿ) ಸಂಬಂಧಿತ ಆಸ್ತಿಗಳಿಗೆ ದಾಖಲಾತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

## ನೀರು ಹರಿಸಿ, ಇಲ್ಲವೇ ರೈತರ ನಷ್ಟ ಭರಿಸಿ

**(1ನೇ ಪುಟದಿಂದ)** ಬಿಜೆಪಿ ಬೆಂಬಲ ಸೂಚಿಸಲಿದೆ ಎಂದು ಬಿ.ಪಿ. ಹರೀಶ್ ತಿಳಿಸಿದರು. ಬಿಜೆಪಿ ರೈತ ಮೋರ್ಚಾ ಪ್ರಮುಖ ಬಿ.ಎಂ. ಸತೀಶ್ ಕೊಳೇನಹಳ್ಳಿ, ಬಿಜೆಪಿ ಮಾಧ್ಯಮ ವಕ್ತಾರ ಹೆಚ್.ಪಿ. ವಿಶ್ವಾಸ್, ಕ್ರೊಟೇಶ್ ಗೌಡ ಪತ್ರಿಕಾಗೋಷ್ಠಿಯಲ್ಲಿದ್ದರು.


## 'ನಿರಾಮಯ'ದಲ್ಲಿ ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ದಾವಣಗೆರೆ: ನಗರದ ವಿಶ್ವೇಶ್ವರಯ್ಯ ಪಾರ್ಕ್ ಹಿಂಭಾಗ ಇರುವ 'ನಿರಾಮಯ' ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕೇಂದ್ರದಲ್ಲಿ ಇಂದು ಉಚಿತ ತಪಾಸಣಾ ಶಿಬಿರ ನಡೆಯಲಿದೆ ಎಂದು ಪ್ರಕೃತಿ ಚಿಕಿತ್ಸಾ ವೈದ್ಯೆ ಡಾ.ಭುವನೇಶ್ವರಿ ಎಸ್. ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 8971576426.

## ನಗರದಲ್ಲಿ ಇಂದು ಆರೋಗ್ಯ ಶಿಬಿರ

ಹೋಮಿಯೋಪಥಿ ವೈದ್ಯಕೀಯ ಸಂಘ, ಕರುಣಾ ಜೀವ ಕಲ್ಯಾಣ ಟ್ರಸ್ಟ್ ಇವರ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಭಾಂಗಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಡಾ. ಮಾವಿಶೆಟ್ಟರ್, ಡಾ. ಕೆ.ಆರ್. ಶರತ್‌ರಾಜ್, ಡಾ.ಸಿ. ಎನ್. ಕೋಟಿಹಾಳ್, ಡಾ.ಎ.ಎನ್. ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ.ಎಸ್. ಗಿರೀಶ್, ಡಾ. ವಿಶ್ವನಾಥ ಹಳ್ಳಿಕೇರಿ, ಡಾ. ರಂಗರಾಜನ್ ತಪಾಸಣಾ ತಂಡದಲ್ಲಿದ್ದಾರೆ.

## ರಾಣೇಬೆನ್ನೂರಿಗೆ ಇಂದು ಬೊಮ್ಮಾಯಿ



ಮರಾಠ ಕ್ಷತ್ರಿಯ ಸಮಾಜ ಏರ್ಪಡಿಸಿರುವ ಛತ್ರಪತಿ ಶಿವಾಜಿ ಮಹಾರಾಜರ ಬೃಹತ್ ಮೆರವಣಿಗೆಗೆ ಚಾಲನೆ ನೀಡಲು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದು ಆಗಮಿಸುವರು. ಕೆಇಬಿ ಗಣೇಶ ದೇವಸ್ಥಾನದಿಂದ ಇಂದು ಸಂಜೆ ಹೊರಡುವ ಈ ಮೆರವಣಿಗೆ ಕಾರ್ಯಕ್ರಮದಲ್ಲಿ ಶಾಸಕ ಪ್ರಕಾಶ ಕೋಳಿವಾಡ, ಮಾಜಿ ಶಾಸಕ ಅರುಣಕುಮಾರ ಪೂಜಾರ ಅವರು ಭಾಗವಹಿಸಲಿದ್ದಾರೆ ಎಂದು ಅಧ್ಯಕ್ಷ ಶಿವಮೂರ್ತಿ ದಿಲ್ಲಿವಾಲಾ ತಿಳಿಸಿದ್ದಾರೆ.

## ಸಮಾಜ ಘಾತುಕ ಕೃತ್ಯಗಳನ್ನು ತಡೆಯಲು ಯುವಕರು ಜಾಗೃತರಾಗಬೇಕು

**(1ನೇ ಪುಟದಿಂದ)** ಮುಖಂಡರೇ ನಾವು ಹಿಂದೂಗಳೇ, ನಾವು ರಾಮ ಭಕ್ತರೇ ಎಂದು ಹೇಳಿಕೊಳ್ಳುತ್ತಿದ್ದಾರೆ. ಭಾರತವನ್ನು ರಾಮರಾಜ್ಯ ಮಾಡುವುದೇ ನಮ್ಮ ಗುರಿ, ಪ್ರತಿ ಮನೆಗಳಲ್ಲೂ ಶ್ರೀರಾಮನ ಸ್ಮರಣೆ ಮಾಡುವಂತಾಗಬೇಕೆಂದರು.

ಜಾತಿ, ಮತ, ಭೇದವೆಂಬ ವಿಷಬೀಜ ಬಿತ್ತಿ ಹಿಂದೂ ಧರ್ಮವನ್ನು ಒಡೆದಾಳುವ ನೀತಿಯ ವಿರುದ್ಧ ಧ್ವನಿ ಎತ್ತಿ ಹಿಂದೂ ಧರ್ಮವನ್ನು ಉಳಿಸಿ, ಒಗ್ಗೂಡಿಸುವ ಕೆಲಸ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಯುವ ಜನತೆ ಜಾಗೃತರಾಗಿ, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ 400 ಕ್ಕೂ ಹೆಚ್ಚು ಸ್ಥಾನಗಳನ್ನು ಬಿಜೆಪಿಯಿಂದ ಗೆಲ್ಲಿಸುವ ಗುರಿ ನಮ್ಮದಾಗಬೇಕು. ತನ್ಮೂಲಕ ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗುವಂತೆ ಮನವಿ ಮಾಡಿದರು.

ಇಡೀ ವಿಶ್ವಕ್ಕೆ ಮೋದಿ ರಿಯಲ್ ಬಾಸ್ ಆಗಿದ್ದಾರೆ. ಅದು ಈ ದೇಶದ ಹಿಂದೂ ಧರ್ಮದ ತಾಕತ್ತು. ಪ್ರಪಂಚದ ಅನೇಕ ದೇಶಗಳನ್ನು ಭಾರತದತ್ತ ಸೆಳೆಯುವ ಮೂಲಕ ಮೋದಿ ವಿಶ್ವಗುರು ಎಂಬ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಭಾರತದ ಪ್ರತಿ ಗ್ರಾಮದ ಮಗುವಿಗೂ ಉನ್ನತ ಶಿಕ್ಷಣ ಸಿಗಬೇಕೆಂಬ ಆಶಯ ಮೋದಿಯವರದು. ಎನ್‌ಇಪಿ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ತರುವ ಪ್ರಯತ್ನ ಮಾಡಲಾಗುತ್ತಿದೆ. ಯುವ ಜನರಿಗೆ ಕೌಶಲ್ಯಾಭಿವೃದ್ಧಿ ಯೋಜನೆ ಮೂಲಕ ಸದೃಢರನ್ನಾಗಿಸಲು ಮುಂದಾಗಿದ್ದು, ಮುಂದಿನ ದಿನಗಳಲ್ಲಿ ಭಾರತವನ್ನು ನಂ.1 ದೇಶವನ್ನಾಗಿ ಮಾಡಬೇಕೆಂಬ ಮಹತ್ವದ ಕನಸು ಮೋದಿಯವರದು ಎಂದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಹಿಂದೂ ಸಂಸ್ಕೃತಿ, ಧರ್ಮ ಉಳಿಯಬೇಕಾದರೆ ಭಾರತ ವಿಶ್ವಗುರುವಾಗಬೇಕು. ಇದಕ್ಕೆ ನರೇಂದ್ರ ಮೋದಿ ಅವರನ್ನು ಮತ್ತೊಂದು ಅವಧಿಗೆ ಪ್ರಧಾನಿಯನ್ನಾಗಿ ಮಾಡಲೇ ಬೇಕಾಗಿದೆ. ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕಾದರೆ ಮೋದಿ ಆಡಳಿತದಿಂದ ಸಾಧ್ಯ ಎಂಬುದು ಬಹುತೇಕರ ಅಭಿಪ್ರಾಯವಾಗಿದೆ ಎಂದು ಹೇಳಿದರು.

**ಅತಿಥ್ ಅಂಬರ್‌ಕರಂತಹ ಯುವ ನಾಯಕರು ಬೇಕು**

**ದೇಶ ಕಟ್ಟುವ ಕೆಲಸದಲ್ಲಿ ಭಾರತೀಯ ಜನತಾ ಪಾರ್ಟಿಗೆ ಅತಿಥ್ ಅಂಬರ್‌ಕರ್‌ರಂತಹ ಯುವ ನಾಯಕರ ಅಗತ್ಯವಿದೆ. ಯುವಜನರನ್ನು ಸಂಘಟಿಸುವಲ್ಲಿ ಉತ್ತಮ ಕಾರ್ಯಕ್ರಮವನ್ನು ಆಯೋಜನೆ ಮಾಡಿರುವುದು ಸಂತಸದ ವಿಚಾರ ಎಂದು ಹಾರಿಕಾ ಮಂಜುನಾಥ್ ಹೇಳಿದರು.**

ಬಿಜೆಪಿ ಯುವ ಮುಖಂಡ ಅತಿಥ್ ಅಂಬರ್‌ಕರ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಹಿರಿಯ ಮುಖಂಡ ಕೆ.ಬಿ. ಶಂಕರನಾರಾಯಣ, ಮಾಜಿ ಶಾಸಕ ಎಂ. ಬಸವರಾಜನಾಯ್ಕ, ಬಿಜೆಪಿ ಮುಖಂಡರಾದ ಎಲ್. ಎನ್. ಕಲ್ಲೇಶ್, ಲೋಕಿಕೆರೆ ನಾಗರಾಜ್, ಡಾ. ಟಿ.ಜಿ. ರವಿಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ಜಿ.ಎಸ್. ಶಾಮ್, ವೀಣಾ ನಂಜಪ್ಪ, ಶಿವರಾಜ ಪಾಟೀಲ್, ಸಂಗನಗೌಡ್ರು, ಜಯಮ್ಮ, ಬಾತಿ ವೀರೇಶ್, ಬಿ.ಜಿ. ಸಿದ್ದೇಶ್, ಕೊಟ್ರೇಶ್ ಗೌಡ ಸೇರಿದಂತೆ ಅನೇಕರಿದ್ದರು.

## ಬಾಡಾ ಕ್ರಾಸ್‌ನಲ್ಲಿ ಅಪರಿಚಿತ ಶವ ಪತ್ತೆ



ದಾವಣಗೆರೆ,ಮಾ.2- ಬಾಡಾ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ ಯಲ್ಲಿ ಸುಮಾರು 25- 30 ವಯಸ್ಸಿನ ಅಪರಿಚಿತ ಪಾದಚಾರಿಗೆ ವಾಹನ ಡಿಕ್ಕಿ ಹೊಡೆದಿದ್ದು, ಆತ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ಮೃತನ ಬಲಕೈ ಮಣಿಕಟ್ಟಿನ ಮೇಲ್ಭಾಗ ಗೌತೇಮ್ಮ , ಬಲ ಹೆಬ್ಬೆರಳ ಮೇಲೆ ಬಸವರಾಜ, ಎಡಗೈ ಮೇಲೆ ಎಂ.ಎನ್, ಎಡ ಮೊಣ ಕೈ ಕೆಳ ಭಾಗದಲ್ಲಿ ನಂದ ಎನ್ನುವ ಹಚ್ಚೆ ಗುರುತುಗಳು ಇರುತ್ತವೆ. ಸಂಬಂಧಪಟ್ಟವರು ದಕ್ಷಿಣ ಸಂಚಾರ ಪೊಲೀಸ್ ಠಾಣೆ (08192-234865, 9480803251, 9480803237) ಯನ್ನು ಸಂಪರ್ಕಿಸಬಹುದು.

## ಬೆಂಗಳೂರು ಸ್ಫೋಟ; ನಾಲ್ವರು ವಶಕ್ಕೆ

ಬೆಂಗಳೂರು, ಮಾ.2- ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ಸಂಭವಿಸಿದ ಸ್ಫೋಟಕ್ಕೆ ಸಂಬಂಧಿಸಿದಂತೆ ಪೊಲೀಸರು ನಾಲ್ವರನ್ನು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು, ಧಾರವಾಡ ಹಾಗೂ ಹುಬ್ಬಳ್ಳಿಗಳಲ್ಲಿ ನಾಲ್ವರನ್ನು ಕೇಂದ್ರ ಅಪರಾಧ ದಳದ ಸಿಬ್ಬಂದಿ ವಶಕ್ಕೆ ತೆಗೆದುಕೊಂಡಿದ್ದು ಸುದೀರ್ಘ ವಿಚಾರಣೆಗೆ ಒಳಪಡಿಸಿದ್ದಾರೆ.

## ಎಲೆಬೇತೂರು ಶಿಖರಪ್ಪ ಪಂಪಾಪತಿ ನಿಧನ



ಜನನ : 05-03-1953

ನಿಧನ : 02-03-2024

ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ ಬಿಜೆಪಿ ಮುಖಂಡರಾದ

**ಶ್ರೀ ಶಿಖರಪ್ಪ ಪಂಪಾಪತಿ** ಅವರು

ದಿನಾಂಕ 02-03-2024ರ ಶನಿವಾರ ರಾತ್ರಿ 11-15ಕ್ಕೆ ನಿಧನರಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಇಬ್ಬರು ಪತ್ನಿಯರು, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03-03-2024ರ ಭಾನುವಾರ ಮಧ್ಯಾಹ್ನ 12.30 ಕ್ಕೆ ಎಲೆಬೇತೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಶಿಖರಪ್ಪ ವಂಶಸ್ಥರು, ಎಲೆಬೇತೂರು.**
**ಮೊ. : 96207 21211, 99161 65788**

## ನೇರ್ಲಿಗೆ ಸಿ.ಎಂ. ವಾಗ್ದೇವಿ ನಿಧನ



ದಾವಣಗೆರೆ ತಾಲ್ಲೂಕು ನೇರ್ಲಿಗೆ ಗ್ರಾಮದ ವಾಸಿ, ದಿ॥ ಗೌಡ್ರ ಎನ್.ಜಿ. ರೇವಣಸಿದ್ದಪ್ಪನವರ ಧರ್ಮಪತ್ನಿ

**ಸಿ.ಎಂ. ವಾಗ್ದೇವಿ** ಅವರು

ದಿನಾಂಕ 02-03-2024ರ ಶನಿವಾರ ರಾತ್ರಿ 10.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03-03-2024ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ನೇರ್ಲಿಗೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ. : 95917 47077, 98866 43110**

॥ ಶ್ರೀ ಉಜ್ಜಿನಿ ಮರುಳಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



**ಶ್ರೀಮತಿ ಪಿ. ಜಯಮ್ಮ**
(ದಿ॥ ಶ್ರೀ ಪಿ. ಹಾಲೇಶಪ್ಪನವರ ಧರ್ಮಪತ್ನಿ)

ದಿನಾಂಕ : 24.02.2024ನೇ ಶನಿವಾರ ಮಧ್ಯಾಹ್ನ 12.00 ಗಂಟೆಗೆ ದೈವಾಧೀನರಾಗಿದ್ದು, ಇವರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 03.03.2024ನೇ ಭಾನುವಾರ ಬೆಳಿಗ್ಗೆ 11.30ಕ್ಕೆ ಚನ್ನಗಿರಿ ವಿರೂಪಾಕ್ಷಪ್ಪನವರ ಧರ್ಮಶಾಲಾ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಶ್ರೀ ಪಿ.ಹೆಚ್. ರಾಜೇಶ್ ಮತ್ತು ಶ್ರೀಮತಿ ಶ್ರೀ ಪಿ.ಹೆಚ್. ಮಹೇಶ್ ಮತ್ತು ಸಹೋದರರು, ಸಹೋದರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ

॥ ಶ್ರೀ ಉಚ್ಚಂಗೆಮ್ಮ ದೇವಿ ಪ್ರಸನ್ನ ॥ ॥ ಶ್ರೀ ಗೋಣಿ ಬಸವೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 06-04-1955 ನಿಧನ : 24-02-2024

ದಾವಣಗೆರೆ ನಗರ ಎಸ್. ನಿಜಲಿಂಗಪ್ಪ ಬಡಾವಣೆ ವಾಸಿ, ಶ್ರೀಮತಿ ಗೀತಮ್ಮ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 24-02-2024ನೇ ಶನಿವಾರ ರಾತ್ರಿ 11.36 ಕ್ಕೆ ನನ್ನ ಪೂಜ್ಯ ಪತಿಯವರಾದ

**ಡಾ॥ ಟಿ. ಪರಶುರಾಮಪ್ಪನವರು**

ಚಿಗಟೇರಿ ಜಿಲ್ಲಾಸ್ಪತ್ರೆ ನಿವೃತ್ತ ಅಧೀಕ್ಷಕರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 03-03-2024ನೇ ಭಾನುವಾರ ಬೆಳಿಗ್ಗೆ 11:30 ಕ್ಕೆ ಮೃತರ ಸ್ವಗೃಹ, 'ಹೊಂಗಿರಣ' # 98, ನ್ಯಾಷನಲ್ ಕಾನ್ವೆಂಟ್ ಶಾಲೆಯ ಹಿಂಭಾಗ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ಎಸ್. ನಿಜಲಿಂಗಪ್ಪ ಬಡಾವಣೆ ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಮೃತರ ಧರ್ಮಪತ್ನಿ ಶ್ರೀಮತಿ ಗೀತಮ್ಮ ಮತ್ತು ಮಕ್ಕಳು, ಕುಟುಂಬದವರು ತೋಟದ ದುಗ್ಗಪ್ಪ ನಾಗಮ್ಮ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 98456 01557**

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಮಾಯಕೊಂಡದ ಕೆ.ಆರ್. ಲಕ್ಷ್ಮಣ ನಿಧನ



ಮಾಯಕೊಂಡ ಗ್ರಾಮದ ವಾಸಿ ನಾಯಕ ಸಮಾಜದ ಮುಖಂಡ, ಕಾಂಗ್ರೆಸ್ ಕಾರ್ಯಕರ್ತ ಕೆ. ಆರ್. ಲಕ್ಷಣ (71) ಇವರು ದಿನಾಂಕ 02.03.2024ರ ಶನಿವಾರ ಬೆಳಿಗ್ಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗು ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.3.2024ರ ಭಾನುವಾರ ಬೆಳಿಗ್ಗೆ 10ಕ್ಕೆ ಮಾಯಕೊಂಡದ ಮೃತರ ಜಮೀನಿನಲ್ಲಿ ನೆರವೇರಲಿದೆ.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas




**ದಿನಾಂಕ : 03.03.2024 ರಿಂದ 09.03.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಬಹಳ ಬಲ್ಲವರಂತೆ, ಬಲ್ಲಿದವರ ಮುಂದೆ ಮಾತನಾಡಲು ಹೋಗಿ ಅಪಮಾನಕ್ಕೆ ಒಳಾಗಾಗುವ ಸಂಭವವಿದೆ, ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸುವುದು ಮೇಲು, ಹಣಕಾಸಿನ ಹರಿವು ಮಧ್ಯಮ ಸ್ಥರದಲ್ಲಿದ್ದರೂ ಹೇರಳ ಅವಕಾಶವು ಬರಲಿದೆ, ಸಿನಿಮಾ ಕಲಾವಿದರ ಸಂಪಾದನೆ ದ್ವಿಗುಣಗೊಳ್ಳಲಿದೆ. ಖಾದ್ಯತೈಲ ವ್ಯಾಪಾರವು ಉತ್ತಮಗೊಳ್ಳಲಿದೆ. ಮತ್ತೊಬ್ಬರ ಭಾವನೆಗಳಿಗೆ ಬೆಲೆಕೊಡುವುದನ್ನು ಕಲಿಯಿರಿ. ಗೋ ಸೇವೆ ಮಾಡಿ. ಭಾನು-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಹಿರಿಯರು ಮಾಡುತ್ತಿದ್ದ ಕೃಷಿ ಕಾರ್ಯವನ್ನೇ ಮುಂದುವರೆಸಿಕೊಂಡು ಹೋಗುವಿರಿ, ಕೆಲವು ವಿಷಯಗಳಲ್ಲಿ ಕಟ್ಟುನಿಟ್ಟಾದ ನಿರ್ಧಾರಗಳನ್ನು ಭವಿಷ್ಯದ ದೃಷ್ಟಿಯಿಂದ ತೆಗೆದುಕೊಳ್ಳುವುದು ಮೇಲು. ಎಷ್ಟೇ ಶ್ರಮಪಟ್ಟು ದುಡಿದರೂ ಆದಾಯದ ಮೂಲವು ಮಧ್ಯಮ ಸ್ಥರದಲ್ಲಿಯೇ ಇರುವುದು, ಆಸ್ತಿ ಖರೀದಿ ವಿಚಾರವನ್ನು ತಾತ್ಕಾಲಿಕವಾಗಿ ಮುಂದೂಡುವುದು ಉತ್ತಮ, ಹೈನುಗಾರಿಕೆ ಲಾಭದಾಯಕ. ಸೋಮ-ಬುಧ-ಶುಕ್ರ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಆದಾಯದ ಮೂಲ ಮಂದಗತಿಯಲ್ಲಿರುವಾಗಲೇ ಮನೆ ಮಂದಿಯ ಬೇಡಿಕೆ ಹೆಚ್ಚಾಗಿ, ಉಳಿತಾಯದ ಗಂಟು ಕರಗಬಹುದು. ಯುವಕರಲ್ಲಿ ಆಸ್ತಿ ಮಾಡುವ ವಿಚಾರದಲ್ಲಿ ಹೆಚ್ಚು ಅವಸರ ಕಂಡುಬರಲಿದೆ. ತುಸು ತಾಳ್ಮೆಯಿಂದ ವರ್ತಿಸುವುದು ಮೇಲು. ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೋರುವ ಅಸಡ್ಡೆ, ಮುಂದಿನ ಉನ್ನತಾಧ್ಯಯನಕ್ಕೆ ಅಡ್ಡಿಯುಂಟಾಗಬಹುದು. ಅನಾವಶ್ಯಕ ವಾಗ್ವಾದ ದಿಂದ ಏನೂ ಪ್ರಯೋಜನವಿಲ್ಲ, ಗುರು ಚರಿತ್ರೆ ಪಠಿಸಿ ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಪ್ರತಿಯೊಂದು ಕಾರ್ಯಕ್ಕೂ ಹೆಚ್ಚು ಪರಾವಲಂಬಿತರಾದಲ್ಲಿ ನಿಮ್ಮಲ್ಲಿ ಆಲಸ್ಯ ಮೂಡಬಹುದು. ಇದು ಭವಿಷ್ಯದ ದೃಷ್ಟಿಯಿಂದ ಒಳ್ಳೆಯದಲ್ಲ, ಆದಾಯದ ಮೂಲದಲ್ಲಿ ಗಣನೀಯ ಏರಿಕೆ ಕಂಡುಬರಲಿದೆ. ಇದರಿಂದ ನಿಮ್ಮ ಹಲವು ಯೋಜನೆಗಳಿಗೆ ಮರುಚಾಲನೆ ಬರಲಿದೆ. ಕಳೆದು ಹೋಗಿದ್ದ ಅಮೂಲ್ಯ ವಸ್ತು ಕೈ ಸೇರಲಿದೆ. ಖ್ಯಾತ ಸಂಗೀತಗಾರರಿಗೆ ವಿದೇಶಗಳಲ್ಲಿ ಹೇರಳ ಅವಕಾಶ ದೊರೆಯಲಿದೆ. ಸಜ್ಜನರ ಸೇವೆ ಮಾಡಿ. ಭಾನು-ಸೋಮ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಶಾಸ್ತ್ರೀಯ ವಿದ್ವಾಂಸರು ಧರ್ಮಸೂಕ್ಷ್ಮಗಳನ್ನು ನಿರ್ಣಯ ಮಾಡುವಾಗ ಬಹಳ ಎಚ್ಚರದಿಂದಿರುವುದು ಮೇಲು. ಕೆಲಸ ಸಾಧಿಸಿದ ತೃಪ್ತಿ ನಿಮ್ಮದಾಗಲಿದೆ. ವೈಯಕ್ತಿಕ ಕೆಲಸಗಳು ಮಂದಗತಿಯಲ್ಲಿ ಸಾಗಲಿವೆ. ಆಸ್ತಿ ಕೊಳ್ಳಲೆಂದು ಕೂಡಿಟ್ಟ ಹಣವು ಮತ್ಯಾವುದಕ್ಕೋ ವಿನಿಯೋಗವಾಗುವ ಸಂಭವವಿದೆ. ಮಕ್ಕಳಿಗೆ ಅಧ್ಯಯನದಲ್ಲಿ ವಿಶೇಷ ಆಸಕ್ತಿ ಮೂಡಲಿದೆ. ಬಂಧುವೊಬ್ಬರು ಹಳೇಯ ವಿಷಯವನ್ನು ಕ್ಯಾತೆ ತೆಗೆದು ವಾಗ್ವಾದ ಮಾಡುವರು. ಗುರು-ಹಿರಿಯರ ಸೇವೆ ಮಾಡಿ. ಭಾನು -ಬುಧ-ಶುಕ್ರ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮನೆಯಲ್ಲಿ ಮಂಗಳ ಕಾರ್ಯವು ಸುಸೂತ್ರವಾಗಿ ನಡೆದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ವಿದ್ವಾಂಸರು ಧಾರ್ಮಿಕ ಸೂಕ್ಷ್ಮಗಳನ್ನು ಬಗ್ಗೆ ಮೂಡಿರುವ ಸಂಶಯವನ್ನು ಬಗೆಹರಿಸಿಕೊಳ್ಳಲು ಧರ್ಮ ಗುರುಗಳ ಬಳಿ ವಾಕ್ಯಾರ್ಥ ಮಾಡುವರು, ಆದಾಯದ ಮೂಲದಲ್ಲಿ ಹೆಚ್ಚಳ ಕಂಡುಬಂದರೂ ಅದು ನಿಮ್ಮನ್ನು ತಲುಪಲು ತುಸು ತಡವಾಗಲಿದೆ, ರಾಜಕಾರಣಿಗಳು ತಮ್ಮ ಬದಲಾದ ನಡಾವಳಿಯಿಂದಾಗಿ ಜನಪ್ರಿಯತೆ ಗಳಿಸುವರು, ಗೋ ಸೇವೆ ಮಾಡಿ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಅತಿಯಾದ ಸ್ವಾಭಿಮಾನ ಕೆಲವೊಮ್ಮೆ ಅಹಂಕಾರಕ್ಕೆ ಕಾರಣ ವಾಗಬಹುದು, ಇದಕ್ಕೆ ಅವಕಾಶ ಮಾಡಿಕೊಡದಿರುವುದು ಉತ್ತಮ, ಆದಾಯದ ಮೂಲದಲ್ಲಿ ಕಡಿತ ಕಂಡರೂ ದೈನಂದಿನ ಜೀವನಕ್ಕೇನೂ ಕೊರತೆ ಇಲ್ಲ, ಗೆಳೆಯನೊಬ್ಬನಾಡುವ ಮಾತು, ನಿಮ್ಮ ಮನಸ್ಸನ್ನು ಘಾಸಿಗೊಳಿಸ ಬಹುದು. ಮನೆಯಲ್ಲಿ ಮಕ್ಕಳ ನಡಾವಳಿ ಬೇಸರ ಮೂಡಿಸಲಿದೆ. ತೀರ್ಥಯಾತ್ರೆ ಸಲುವಾಗಿ ಸಿದ್ಧತೆ ಮಾಡಿಕೊಳ್ಳುವಿರಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ನಿರುದ್ಯೋಗಿ ಪದವೀಧರರು ಉದ್ಯೋಗಾನ್ವೇಷಣೆಗಿಂತ ಸ್ವಂತ ಉದ್ಯೋಗದ ಕಡೆ ಗಮನಹರಿಸುವರು, ಬದಲಾದ ನಿಮ್ಮ ನಡಾವಳಿಯಿಂದ ಬಂಧುಗಳ ಮನ ಗೆಲ್ಲುವಿರಿ, ವ್ಯವಹಾರದಲ್ಲಿ ಹೆಚ್ಚಿನ ಆದಾಯ ಇರುವುದರಿಂದ ಉಳಿತಾಯದ ಬಗ್ಗೆ ಸ್ವಲ್ಪ ವಿಚಾರ ಮಾಡಬಹುದು, ವಿದ್ಯಾರ್ಥಿಗಳು ಶ್ರಮಕ್ಕೆ ತಕ್ಕ ಫಲ ಪಡೆಯುವರು, ನಡೆಯಲಿರುವ ಮಂಗಳ ಕಾರ್ಯಕ್ಕೆ ವಡವೆ-ವಸ್ತುಗಳ ಖರೀದಿ ಭರದಿಂದ ನಡೆಯಲಿದೆ, ಮಹಿಳೆಯರಿಗೆ ಉತ್ತಮ ದಿನಗಳು. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಪದವೀಧರರು ನಿಶ್ಚಿತ ಗುರಿಯೊಂದಿಗೆ ಮುಂದುವರೆದಲ್ಲಿ ಯಶಸ್ಸು ಖಂಡಿತಾ ಲಭಿಸಲಿದೆ. ನಿಮ್ಮನ್ನು ದ್ವೇಷಿಸುತ್ತಿದ್ದ ವೈರಿಗಳೇ ನಿಮ್ಮ ನೆರವು ಬಯಸಿಬರುವವರು ಎಂಬುದೇ ಈ ವಾರದ ಆಶ್ಚರ್ಯ ಸಂಗತಿಯಾಗಲಿದೆ. ವಿದೇಶದಲ್ಲಿರುವ ಮಗನು ಸ್ವದೇಶದಲ್ಲಿ ಆಸ್ತಿ ಮಾಡಲು ಯತ್ನಿಸುವನು.ದವಸ-ಧಾನ್ಯಗಳನ್ನು ಆಮದು-ರಫ್ತು ಮಾಡುವವರಿಗೆ ಹೆಚ್ಚಿನ ವಹಿವಾಟ ನಿಂದಾಗಿ ಲಾಭ ಹೆಚ್ಚುವುದು, ಬಡವರಿಗೆ ನೆರವಾಗಿ. ಭಾನು-ಗುರು-ಶನಿ ಶುಭದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ವ್ಯವಹಾರದಲ್ಲಿ ತೋರುವ ಚಾತುರ್ಯದಿಂದಾಗಿ ತುಸು ಉಳಿತಾಯ ವಾಗಲಿದೆ, ಜೊತೆಗೆ ವೈಯಕ್ತಿಕ ಆದಾಯದಲ್ಲೂ ಏರಿಕೆ, ಆಸ್ತಿ ಖರೀದಿಗಿದ್ದ ಅಡ್ಡಿ ಆತಂಕಗಳು ದೂರವಾಗಲಿವೆ. ನಿಮ್ಮ ನಡೆ ಕೆಲವೊಮ್ಮೆ ವೈರಿಗಳಿಗೆ ನಿಗೂಢ ವಾಗಿ ಕಾಣಲಿದೆ. ಕೆಲವೊಮ್ಮೆ ಹೆಚ್ಚಿದ ಕೆಲಸ ಕಾರ್ಯಗಳ ಒತ್ತಡದಿಂದಾಗಿ ದೈಹಿಕ ಶ್ರಮ ಹೆಚ್ಚಗಲಿದೆ. ಸಕಾಲಿಕ ವಿಶ್ರಾಂತಿ ತೆಗೆದುಕೊಳ್ಳಿ. ರಕ್ತದೊತ್ತಡ ಸಮಸ್ಯೆಯಿರುವವರು ತುಸು ಎಚ್ಚರದಿಂದಿರಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ರೈತಾಪಿ ಮಿತ್ರರು ಬೆಳೆ ಮಾರಾಟ ವಿಷಯದಲ್ಲಿ ಮಧ್ಯವರ್ತಿಗಳ ಕಪಿಮುಷ್ಠಿಗೆ ಸಿಲುಕುವಿರಿ, ಸರ್ಕಾರದಿಂದ ಆಗಬೇಕಾಗಿರುವ ಕೆಲಸಗಳು ನೆನೆಗುದಿಗೆ ಬೀಳಲಿವೆ. ಜೊತೆಗೆ ಅನಿಶ್ಚಿತತೆಯೂ ಕಾಡಲಿದೆ, ಸ್ಥಿರ ಆಸ್ತಿ ಖರೀದಿ ವಿಚಾರ ಮಧ್ಯದಲ್ಲಿಯೇ ಮುರಿದುಬೀಳುವ ಸಂಭವವಿದೆ, ಮುಂಗಡ ಕೊಟ್ಟಿದ್ದರೆ ಮರಳಿ ಪಡೆಯಿರಿ. ಲೆಕ್ಕಪರಿಶೋಧಕರಿಗೆ ಹೆಚ್ಚಿನ ಬೇಡಿಕೆ ಬರಲಿದೆ, ಸಮಾಜ ಸೇವಕರಿಗೆ ಸನ್ಮಾನವಾಗಲಿದೆ, ಗುರು ಚರಿತ್ರೆ ಪಠಿಸಿ. ಭಾನು-ಮಂಗಳ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮಡದಿ ಮಕ್ಕಳಿಗೆ ಹೆಚ್ಚಿದ ವಿದೇಶಿ ವಸ್ತುಗಳ ವ್ಯಾಮೋಹ ನಿಮಗೆ ಪೀಕಲಾಟವಾಗಲಿದೆ. ನೀವು ಎಷ್ಟೇ ಪ್ರಾಮಾಣಿಕರಾಗಿದ್ದರೂ, ಸ್ನೇಹಿತರು ನಂಬದೇ ಹೋಗಬಹುದು, ನಿರೀಕ್ಷೆ ಮಟ್ಟ ಮುಟ್ಟಿದ ಆದಾಯ ನಿಮಗೆ ತುಸು ನೆಮ್ಮದಿ ತರಲಿದೆ. ಘಟಿಸಿದ್ದ ಯಾವುದೋ ಹಳೆಯ ವಿಷಯವೊಂದು ಮತ್ತೆ ಮುನ್ನೆಲೆಗೆ ಬಂದು, ಮನೆಯಲ್ಲಿ ಅಶಾಂತಿಯನ್ನುಂಟು ಮಾಡಲಿದೆ, ಅನುಭವಿಗಳಾದ ಹಿರಿಯರ ಆಣತಿಯಂತೆ ನಡೆದುಕೊಳ್ಳಿ. ಸೋಮ-ಗುರು-ಶುಕ್ರ-ಶುಭ ದಿನಗಳು.

**ಈ ವಾರದ ವಿಶೇಷತೆಗಳು :**

**ದಿನಾಂಕ: 8.3.2024ನೇ ಶುಕ್ರವಾರ ಮಹಾಶಿವರಾತ್ರಿ ಉಪವಾಸ, ಮಾದನೂರು ವಿಷ್ಣು ತೀರ್ಥರ ಆರಾಧನೆ (ಮಾದನೂರು)**

## ಜನಪ್ರತಿನಿಧಿಗಳಿಗೆ ಲಂಚ ವಿನಾಯಿತಿ : ನಾಳೆ ಸುಪ್ರೀಂ ತೀರ್ಪು

ನವದೆಹಲಿ, ಮಾ. 2 – ಶಾಸನಸಭೆಗಳಲ್ಲಿ ಭಾಷಣ ಮಾಡಲು ಇಲ್ಲವೇ ಮತ ಚಲಾಯಿಸುವಾಗ ಲಂಚ ಪಡೆಯಲು ಸಂಸದರು ಹಾಗೂ ಶಾಸಕರಿಗೆ ವಿನಾಯಿತಿ ಇದೆಯೇ ಎಂಬ ಬಗ್ಗೆ ಸುಪ್ರೀಂ ಕೋರ್ಟ್ ಮಾರ್ಚ್ 4ರ ಸೋಮವಾರದಂದು ತೀರ್ಪು ನೀಡಲಿದೆ.

ಏಳು ಸದಸ್ಯರ ಸಂವಿಧಾನಿಕ ಪೀಠ ಈ ಪ್ರಕರಣದ ತೀರ್ಪನ್ನು ಅಕ್ಟೋಬರ್ 5, 2023ರಲ್ಲಿ ಕಾಯ್ದಿರಿಸಿತ್ತು. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ಸೋಮವಾರ ಈ ಪ್ರಕರಣದ ತೀರ್ಪು ನೀಡಲಿದೆ.

ಲಂಚಕ್ಕೆ ಎಂದೂ ವಿನಾಯಿತಿ ನೀಡಲು ಸಾಧ್ಯವಿಲ್ಲ. ಸಂಸತ್ತಿನಲ್ಲಿ ಹಕ್ಕು ನೀಡಲಾಗಿದೆ ಎಂಬ ಮಾತ್ರಕ್ಕೆ ಸಂಸದರು ಕಾನೂನಿಗೆ ಅತೀತರಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ವಾದ ಮಂಡಿಸಿತ್ತು.

1998ರಲ್ಲಿ ತೀರ್ಪು ನೀಡಿದ್ದ ಐವರು ಸದಸ್ಯರ ಸುಪ್ರೀಂ ಕೋರ್ಟ್ ಪೀಠ, ಶಾಸನಸಭೆಗಳಲ್ಲಿ ಭಾಷಣ ಮಾಡಲು ಇಲ್ಲವೇ ಮತ ಚಲಾಯಿಸಲು ಲಂಚ ಪಡೆದವರಿಗೆ ಕಾನೂನಿನಿಂದ ವಿನಾಯಿತಿ ಇದೆ ಎಂದು ತಿಳಿಸಿತ್ತು. ಈ ತೀರ್ಪನ್ನು ಮರು ಪರಿಶೀಲಿಸಲಾಗುತ್ತಿದೆ.

## ಗಡಿಯಲ್ಲಿ ಚಕಮಕಿ : ಓರ್ವ ಕಳ್ಳಸಾಗಣೆದಾರ ಹತ, ಬಿ.ಎಸ್.ಎಫ್.ನ ಮೂವರಿಗೆ ಗಾಯ

ಶಿಲ್ಲಾಂಗ್, ಮಾ. 2 – ಮೇಘಾಲಯದ ಭಾರತ – ಬಾಂಗ್ಲಾದೇಶದ ಗಡಿಯ ಬಳಿ ಗುಂಪೊಂದು ಅರೆ ಸೇನಾ ಪಡೆಗಳ ಮೇಲೆ ದಾಳಿ ನಡೆಸಿದೆ. ಈ ಸಂದರ್ಭದಲ್ಲಿ ಚಕಮಕಿ ನಡೆದು ಓರ್ವ ಕಳ್ಳಸಾಗಣೆದಾರ ಹತನಾಗಿದ್ದಾನೆ ಹಾಗೂ ಮೂವರು ಬಿ.ಎಸ್.ಎಫ್. ಸಿಬ್ಬಂದಿ ಸೇರಿದಂತೆ ನಾಲ್ವರು ಗಾಯಗೊಂಡಿದ್ದಾರೆ.

ಶುಕ್ರವಾರ ರಾತ್ರಿ ದಲಿಯಾ ಎಂಬ ಹಳ್ಳಿಯಲ್ಲಿ ಭಾರತ ಹಾಗೂ ಬಾಂಗ್ಲಾದೇಶದ ಕಳ್ಳಸಾಗಣೆದಾರರು ಗಡಿಯ ಎರಡೂ ಕಡೆ ನೆರೆದಿದ್ದರು. ಕಳ್ಳಸಾಗಣೆಗೆ ಅವರು ಪ್ರಯತ್ನ ನಡೆಸಿದ್ದರು ಎಂದು ಬಿ.ಎಸ್.ಎಫ್. ಹೇಳಿಕೆಯಲ್ಲಿ ತಿಳಿಸಲಾಗಿದೆ. ಕಳ್ಳಸಾಗಣೆದಾರರು ಕಲ್ಲುಗಳು, ಹರಿತ ಶಸ್ತ್ರಾಸ್ತ್ರ ಹಾಗೂ ಬಡಿಗೆಗಳಿಂದ ಬಿ.ಎಸ್.ಎಫ್. ಸಿಬ್ಬಂದಿ ಮೇಲೆ ದಾಳಿ ನಡೆಸಿದರು. ಇದಕ್ಕೆ ಪ್ರತಿಯಾಗಿ ಬಿ.ಎಸ್.ಎಫ್. ಸಿಬ್ಬಂದಿ ಗುಂಡು ಹಾರಿಸಿದರು.

ಘಟನೆಯಲ್ಲಿ ಮೂವರು ಬಿ.ಎಸ್.ಎಫ್. ಸಿಬ್ಬಂದಿ ಹಾಗೂ ಓರ್ವ ಬಾಂಗ್ಲಾದೇಶಿ ಕಳ್ಳಸಾಗಣೆದಾರ ಗಾಯಗೊಂಡಿದ್ದಾರೆ. ಮೇಘಾಲಯದಿಂದ ಬಾಂಗ್ಲಾದೇಶಕ್ಕೆ ಜಾನುವಾರುಗಳು, ಸಕ್ಕರೆ, ಈರುಳ್ಳಿ, ಮದ್ಯ ಹಾಗೂ ಇತರೆ ವಸ್ತುಗಳನ್ನು ಕಳ್ಳಸಾಗಣೆ ಮಾಡಲಾಗುತ್ತಿತ್ತು ಎಂದು ಬಿ.ಎಸ್.ಎಫ್. ತಿಳಿಸಿದೆ.

# ಸ್ಫೋಟ: ಕಟ್ಟೆಚ್ಚರ ವಹಿಸಲು ಸಿಎಂ ಸೂಚನೆ

ಬೆಂಗಳೂರು, ಫೆ. 2 – ಬೆಂಗಳೂರು ಸ್ಫೋಟದ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಸ್ಫೋಟಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸ್ಥಳ ಪರಿಶೀಲನೆ ಮತ್ತು ಗಾಯಾಳುಗಳ ಕ್ಷೇಮ ವಿಚಾರಿಸಿದ ನಂತರ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿ ಹಲವಾರು ಸೂಚನೆಗಳನ್ನು ನೀಡಿದ್ದಾರೆ.

ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಕಿಡಿಗೇಡಿಗಳು ಕಾನೂನು ಸುವ್ಯವಸ್ಥೆ ಹಾಳು ಮಾಡಲು ಪ್ರಯತ್ನಿಸುತ್ತಾರೆ ಎಚ್ಚರವಿರಲಿ. ಜನನಿಬಿಡ ಪ್ರದೇಶ, ಪ್ರವಾಸಿ ಕೇಂದ್ರ, ಅಣೆಕಟ್ಟುಗಳ ಸುರಕ್ಷತೆ, ಆಸ್ಪತ್ರೆ, ಸರ್ಕಾರಿ ಕಚೇರಿ, ರೈಲು ಮತ್ತು ಬಸ್ ನಿಲ್ದಾಣಗಳಲ್ಲಿ ಅತ್ಯಂತ ಸೂಕ್ಷ್ಮವಾಗಿ ಗಮನಿಸಬೇಕು ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಿ ಎಂದಿದ್ದಾರೆ.

ಬಾಂಬ್ ಸ್ಫೋಟ ಮಾಡಿದ ವ್ಯಕ್ತಿ ಮತ್ತು ಗುಂಪನ್ನು ಶೀಘ್ರದಲ್ಲೇ ಬಂಧಿಸುವ ವಿಶ್ವಾಸವನ್ನು ಪೊಲೀಸರು ಮುಖ್ಯಮಂತ್ರಿ ಅವರಿಗೆ ನೀಡಿದ್ದು, ಎನ್‌ಐಎಗೆ ವಹಿಸುವುದು ಬೇಡ ಎಂದಿದ್ದಾರೆ.

ರಾಜ್ಯಸಭಾ ಚುನಾವಣಾ ಫಲಿತಾಂಶದ ನಂತರ ಸಂಭ್ರಮಾಚರಣೆ ಸಂದರ್ಭದಲ್ಲಿ ನಡೆದ ಘಟನೆಯ ತನಿಖಾ ವಿವರವನ್ನೂ ಪೊಲೀಸರು ಮುಖ್ಯಮಂತ್ರಿ ಗಮನಕ್ಕೆ ತಂದಿದ್ದಾರೆ. ವಿಧಾನಸೌಧ ಮತ್ತು ಅದರ ಸುತ್ತಮುತ್ತಲ ಸುರಕ್ಷತಾ ಹೊಣೆ ಹೊತ್ತಿರುವ ಪೊಲೀಸ್ ಅಧಿಕಾರಿ



ಯನ್ನು ಮುಖ್ಯಮಂತ್ರಿ ಅವರು ಸಭೆಯಲ್ಲೇ ತರಾಟೆಗೆ ತೆಗೆದುಕೊಂಡಿದ್ದಾರೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಾಂಬ್ ಸ್ಫೋಟಗೊಂಡ ರಾಮೇಶ್ವರ ಕೆಫೆಗೆ ತೆರಳಿ ಪರಿಶೀಲನೆ ನಡೆಸಿದ್ದೇನೆ, ಸ್ಫೋಟಕ ಇಟ್ಟು ಹೋಗಿದ್ದ ಆರೋಪಿಯ ಪತ್ತೆ ಹಚ್ಚುವ ಕಾರ್ಯ ಚುರುಕಾಗಿ ನಡೆದಿದೆ ಎಂದರು.

ಆರೋಪಿ ಮಾಸ್ಕ್ ಮತ್ತು ಟೋಪಿ ಧರಿಸಿ ಬಸ್ಸಿನಲ್ಲಿ ಬಂದು ತಿಂಡಿ ತಿಂದು ನಂತರ ಸ್ಫೋಟಕವುಳ್ಳ ಬ್ಯಾಗ್ ಇಟ್ಟು ತೆರಳಿದ್ದಾನೆ, ಆದಷ್ಟು ಬೇಗ ಕೃತ್ಯ ಎಸಗಿದ ವ್ಯಕ್ತಿಯನ್ನು ಪತ್ತೆಹಚ್ಚಿ ಬಂಧಿಸಲಾಗುವುದು ಎಂದು ಹೇಳಿದರು.

ಘಟನೆಯಲ್ಲಿ ಗಾಯಗೊಂಡಿದ್ದವರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಿಜೆಪಿ ನಾಯಕರು ಸಾವು - ನೋವಿನಲ್ಲೂ ರಾಜಕಾರಣ ಮಾಡುತ್ತಿದ್ದಾರೆ. ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಸಂಭವಿಸಿದ್ದು ಬಿಜೆಪಿ ಕಾಲದಲ್ಲಿ ಅಲ್ಲವೇ? ಆಗಲೂ ತುಷ್ಟೀಕರಣದಿಂದಾಗಿ ಸ್ಫೋಟ ನಡೆದಿತ್ತೆ ಎಂದು ತಮ್ಮನ್ನು ಪ್ರಶ್ನಿಸಿದ ಮಾಧ್ಯಮಗಳಿಗೆ ಮರು ಪ್ರಶ್ನೆ ಹಾಕಿದರು.

## ಬೆಂಗಳೂರು ಸ್ಫೋಟಕ್ಕೆ ಮಂಗಳೂರಿನ ಸಂಪರ್ಕ

ಬೆಂಗಳೂರು, ಮಾ. 2 - ಬೆಂಗಳೂರು ಹಾಗೂ ಮಂಗಳೂರಿನಲ್ಲಿ ನಡೆದ ಸ್ಫೋಟಗಳಿಗೆ ಸಂಬಂಧ ಇರುವುದು ಕಂಡು ಬರುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎರಡೂ ಕಡೆ ಬಳಸಲಾದ ಬಾಂಬ್‌ಗಳಲ್ಲಿ ಬಳಸಲಾದ ಟೈಮರ್ ಹಾಗೂ ಸಾಮಗ್ರಿಗಳು ಒಂದೇ ರೀತಿ ಇವೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ ಎಂದರು. ತನಿಖೆಗಾಗಿ 7-8 ತಂಡಗಳನ್ನು ರಚಿಸಲಾಗಿದೆ. ಪೊಲೀಸರು ಎಲ್ಲಾ ದೃಷ್ಟಿಕೋನಗಳಿಂದ ತನಿಖೆ ನಡೆಸುತ್ತಿದ್ದಾರೆ. ಮಂಗಳೂರು ಹಾಗೂ ಶಿವಮೊಗ್ಗಗಳ ಪೊಲೀಸರೂ ಬೆಂಗಳೂರಿಗೆ ಬಂದು ತನಿಖೆಯಲ್ಲಿ ಭಾಗಿಯಾಗಿದ್ದಾರೆ ಎಂದರು.

2022ರಲ್ಲಿ ಮಂಗಳೂರಿನಲ್ಲಿ ಸುಧಾರಿತ ಸ್ಫೋಟಕವನ್ನು ಕುಕ್ಕರ್‌ನಲ್ಲಿ ಆಟೋದಲ್ಲಿ ಸಾಗಿಸುತ್ತಿದ್ದಾಗ ಸ್ಫೋಟಗೊಂಡಿತ್ತು. ಕದ್ರಿ ಮಂಜನಾಥ ದೇವಾಲಯದಲ್ಲಿ ಸ್ಫೋಟ ನಡೆಸಲು ಇದನ್ನು ಸಾಗಿಸಲಾಗುತ್ತಿತ್ತು ಎಂಬುದು ತನಿಖೆಯಿಂದ ಕಂಡು ಬಂದಿತ್ತು.

ಈ ಸ್ಫೋಟದಲ್ಲಿ ಇಸ್ಲಾಮಿಕ್ ಸ್ಟೇಟ್ ಹಾಗೂ ಲಷ್ಕರ್ ಎ ತೊಯ್ಬಾ ಸಂಘಟನೆಗಳು ಭಾಗಿಯಾಗಿರುವುದು ತನಿಖೆಯಿಂದ ಕಂಡು ಬಂದಿತ್ತು. ವಿಶ್ವಮಟ್ಟದಲ್ಲಿ ಐಟಿ ಕಾರಿಡಾರ್ ಎಂದು ಗುರುತಿಸಲ್ಪಟ್ಟಿರುವ ನಗರದ ವೈಟ್‌ಫೀಲ್ಡ್‌ನ ಜನದಟ್ಟಣೆ ಪ್ರದೇಶವೇ ಸುಕ್ಷಿತವಾಗಿಲ್ಲ ಎಂಬುದನ್ನು ಜಾಗತಿಕ ಮಟ್ಟದಲ್ಲಿ ತೋರ್ಪಡಿಸಲು ಬೆಂಗಳೂರಿನಲ್ಲಿ ಯತ್ನ ಮಾಡಲಾಗಿದೆ ಎಂದು ಶಂಕಿಸಲಾಗಿದೆ.

# ಜಿಲ್ಲಾ ವಕೀಲರ ಸಂಘದಿಂದ ಮಜ್ಜಿಗೆ ವಿತರಣೆ



ದಾವಣಗೆರೆ, ಮಾ.2- ಜಿಲ್ಲಾ ವಕೀಲರ ಸಂಘದಿಂದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿರುವ ವಕೀಲರ ಸಾಂಸ್ಕೃತಿಕ ಭವನದ ಆವರಣದಲ್ಲಿ ಬೇಸಿಗೆಯ ನಿಮಿತ್ತ ಮಜ್ಜಿಗೆ ವಿತರಣೆ ಕಾರ್ಯಕ್ರಮಕ್ಕೆ ನಿನ್ನೆ ಚಾಲನೆ ನೀಡಲಾಯಿತು. ಹಿರಿಯ ನ್ಯಾಯವಾದಿಗಳಾದ ಎಂ.ಬಿ. ಶಿವಾನಂದಪ್ಪ ಮತ್ತು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಜ್ಜಿಗೆ ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಕೆ. ಬಸವರಾಜ್ ಗೋಪನಾಳ್, ಕಾರ್ಯದರ್ಶಿ ಎಸ್. ಬಸವರಾಜ್, ಸಹಕಾರ್ಯದರ್ಶಿ ಎಸ್. ಮಂಜುನಾಥ್, ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ. ಚೌಡಪ್ಪ, ಟಿ.ಹೆಚ್.ಮಧುಸೂದನ್, ನಾಗರಾಜ್ ಎಲ್.,ನೀಲಕಂಠಯ್ಯ ಕೆ.ಎಂ., ರಾಘವೇಂದ್ರ ಎಂ., ಸಂತೋಷ್ ಕುಮಾರ್ ಜಿ.ಜೆ., ಶ್ರೀಮತಿ ಭಾಗ್ಯಲಕ್ಷ್ಮಿ, ಅಜ್ಜಯ್ಯ ಬಿ. ಹಾಗೂ ಇನ್ನಿತರೆ ವಕೀಲರು ಹಾಜರಿದ್ದರು.ಂ

# 60 ವರ್ಷದ ಮಹಿಳೆ ಮೇಲೆ ಅತ್ಯಾಚಾರ ಆರೋಪಿಗೆ 25 ವರ್ಷ ಕಾರಾಗೃಹ ಶಿಕ್ಷೆ

ದಾವಣಗೆರೆ, ಮಾ.2- 60 ವರ್ಷ ವಯಸ್ಸಿನ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪಿಗೆ ಇಲ್ಲಿನ ಘನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಎಫ್.ಟಿ.ಎಸ್.ಸಿ-1 ನ್ಯಾಯಾಲಯವು 25 ವರ್ಷ ಕಾರಾಗೃಹ ಶಿಕ್ಷೆ ಹಾಗೂ 37 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಹೊನ್ನಾಳಿ ತಾಲ್ಲೂಕು ಅರಕೆರೆಯ ಎ.ಕೆ. ಕಾಲೋನಿಯ ಜ್ಯೋತಿ ಎಂಬುವವರು 60 ವರ್ಷದ ತನ್ನ ತಾಯಿ ಮೇಲೆ ಅಂಜಿನಪ್ಪ ಅವರು ರಾತ್ರಿ ಅತ್ಯಾಚಾರ ಎಸಗಿದ್ದಾರೆ ಎಂದು ಹೊನ್ನಾಳಿ ಠಾಣೆಯಲ್ಲಿ 2022ರ ಏಪ್ರಿಲ್ 1ರಂದು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ ಅಂಜಿನಪ್ಪನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಎನ್. ಶ್ರೀಪಾದ್ ಅವರು ಆರೋಪ ಸಾಬೀತಾಗಿದ್ದರಿಂದ ಆರೋಪಿ ಅಂಜಿನಪ್ಪಗೆ 2024ರ ಮಾ.1ರಂದು ತೀರ್ಪು ನೀಡಿ ಆದೇಶಿಸಿದ್ದಾರೆ. ಪಿರ್ಯಾದಿ ಪರವಾಗಿ ಸರ್ಕಾರಿ ವಕೀಲರಾದ ಸುನಂದ ಮಡಿವಾಳರ್ ನ್ಯಾಯ ಮಂಡಿಸಿದ್ದರು. ಆರೋಪಿಯ ವಿರುದ್ಧ ಪೊಲೀಸ್ ನಿರೀಕ್ಷಕ ದೇವರಾಜ್ ಟಿ.ವಿ. ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

# ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ ಋತುಚಕ್ರ ನಿರ್ವಹಣೆ ಕಾರ್ಯಾಗಾರ

ದಾವಣಗೆರೆ, ಮಾ. 2- ಮಹಿಳೆಯರು ತಮ್ಮ ಮುಟ್ಟಿನ ಸಮಯದಲ್ಲಿ ಒಮ್ಮೆ ಬಳಸಿ ಬಿಸಾಡುವ ಸ್ಯಾನಿಟರಿ ಪ್ಯಾಡ್ ಗಳು ಹಾನಿಕರವಾಗಿದ್ದು ತೆರೆದ ಜಾಗಗಳಲ್ಲಿ ಇವುಗಳನ್ನು ಹಾಕುವುದರಿಂದ ಇವುಗಳು ಕೊಳೆಯದೇ ಹಾಗೇ ಉಳಿದು ಸೋಂಕುಗಳನ್ನು ಮತ್ತು ಕಾಯಿಲೆಗಳನ್ನು ಹರಡಿ ಮನುಷ್ಯ ಹಾಗು ಪ್ರಾಣಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿವೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ತಿಳಿಸಿದರು.

ಜಿಲ್ಲಾ ಪೊಲೀಸ್ ಮತ್ತು ಹಸಿರು ದಳ ಸಂಸ್ಥೆ ಇವರ ಸಹಯೋಗದಲ್ಲಿ ಜಿಲ್ಲೆಯ ಮಹಿಳಾ ಪೊಲೀಸ್ ಅಧಿಕಾರಿ ಸಿಬ್ಬಂದಿಗಳಿಗೆ ಘನತ್ಯಾಜ್ಯ ನಿರ್ವಹಣೆ ಮತ್ತು ಋತುಚಕ್ರ ನಿರ್ವಹಣೆ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಿನ್ನೆ ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತರಬೇತುದಾರರಾದ ಶ್ರೀಮತಿ ಶ್ರೀದೇವಿ ಹಾಗೂ ದಾವಣಗೆರೆ ಜಿಲ್ಲೆಯ ಹಸಿರು ದಳ ಸಂಸ್ಥೆಯ ಕಾರ್ಯಕ್ರಮ ವ್ಯವಸ್ಥಾಪಕ ಹೆಚ್.ಎ. ಗುರುರಾಜ್ ಮಾತನಾಡಿ, ಈ ಸ್ಯಾನಿಟರಿ ಪ್ಯಾಡ್ ಗಳನ್ನು ಸಂಸ್ಕರಿಸಿ, ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡುವುದು ಬಹಳ ಕಷ್ಟಕರವಾಗಿರುವುದರಿಂದ ಇವುಗಳ ಬಳಕೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಹಸಿರು ದಳ ಸಂಸ್ಥೆಯು ಮುಟ್ಟಿನ ನೈರ್ಮಲ್ಯ ಮತ್ತು ಮರುಬಳಕೆಯ ಮುಟ್ಟಿನ ಆಯ್ಕೆಗಳ ತರಬೇತಿಗಳನ್ನು ನಗರ ಮತ್ತು ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ ಮತ್ತು ಮಹಿಳೆಯರಿಗೆ ನೀಡುತ್ತಿದೆ.



ಅದರಲ್ಲೂ ವಿಶೇಷವಾಗಿ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಐಪಿಎಸ್ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮಹಿಳಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಬೆಂಗಳೂರಿನ ಸ್ತ್ರೀರೋಗ ತಜ್ಞರಾದ ಡಾ. ಮೀನಾಕ್ಷಿ ವರ್ಚ್ಯುವಲ್ ಮೀಟಿಂಗ್ ಮೂಲಕ ಮರು ಬಳಕೆಯ ಮುಟ್ಟಿನ ಆಯ್ಕೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಕೆಲಸದ ಸಮಯದಲ್ಲಿ ಮಹಿಳಾ ಸಿಬ್ಬಂದಿಗಳು ಅನುಭವಿಸುವ ಮುಜುಗರವನ್ನು ಹೋಗಲಾಡಿಸುವುದು ಇದರ ಉದ್ದೇಶವಾಗಿದೆ ಎಂದು ತಿಳಿಸಿದರು.

ತರಬೇತುದಾರರಾದ ನೂರ್ ಜಹಾನ್, ಮೈಸೂರು ಜಿಲ್ಲೆಯ ಹಸಿರು ದಳ ಸಂಸ್ಥೆಯ ಕಾರ್ಯಕ್ರಮ ವ್ಯವಸ್ಥಾಪಕರಾದ ಚೈತ್ರ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಮಹಿಳೆಯರಿಗೆ ನೈಸರ್ಗಿಕ ಕ್ರಿಯೆಗಳಲ್ಲಿ ಒಂದಾದ ಮುಟ್ಟಿನ ವಿಷಯದಲ್ಲಿ ಮುಕ್ತವಾಗಿ ಚರ್ಚೆ, ಅದರ ಬಗ್ಗೆ ಜ್ಞಾನ ತಿಳಿದುಕೊಳ್ಳುವಲ್ಲಿ ಇಂದಿಗೂ ಸಹ ಮುಜುಗರ ಇದೆ. ಅದರಲ್ಲೂ ವಿಶೇಷವಾಗಿ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ ಮುಟ್ಟಿನ ನೈರ್ಮಲ್ಯ ಮತ್ತು ಋತುಚಕ್ರ ನಿರ್ವಹಣೆ ಬಗ್ಗೆ ಅರಿವು ತುಂಬಾ ಅವಶ್ಯಕವಾಗಿದ್ದು, ಈ ಹಿನ್ನೆಲೆಯಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

**- ಉಮಾ ಪ್ರಶಾಂತ್**, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

## ನಗರದಲ್ಲಿಂದು ಚಿತ್ರಸಂತೆ

ದಾವಣಗೆರೆ ಚಿತ್ರಸಂತೆ ಎ.ವಿ.ಕೆ. ಕಾಲೇಜು ರಸ್ತೆಯಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಚಿತ್ರಸಂತೆಗೆ ಚಾಲನೆ ನೀಡುವರು. ಪರಿಷತ್ ಅಧ್ಯಕ್ಷ ಡಿ.ಸಿ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ.

ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಡಿ.ಜಿ.ಶಾಂತನಗೌಡ, ಕೆ.ಎಸ್. ಬಸವಂತಪ್ಪ, ಬಿ. ದೇವೇಂದ್ರಪ್ಪ, ಮೇಯರ್ ವಿನಾಯಕ ಪೈಲ್ವಾನ್, ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಎಸ್ಪಿ ಉಮಾ ಪ್ರಶಾಂತ್, ಪಾಲಿಕೆ ಆಯುಕ್ತರಾದ ರೇಣುಕಾ ಮತ್ತಿತರರು ಭಾಗವಹಿಸಲಿದ್ದಾರೆ.

ಸಂಜೆ 5.15 ಕ್ಕೆ ಚಿತ್ರಸಂತೆ ಸಮಾರೋಪ ಸಮಾರಂಭ ನಡೆಯಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಬಿ.ಪಿ. ಹರೀಶ್, ಬಸವರಾಜ ಶಿವಗಂಗಾ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಜಿ.ಪಂ. ಸಿಇಓ ಡಾ. ಸುರೇಶ್ ಬಿ. ಇಟ್ನಾಳ್ ಮತ್ತಿತರರು ಭಾಗಹಿಸಲಿದ್ದಾರೆ.



# ಚಿತ್ರ ಕಲೆಯೂ ಸೌಂದರ್ಯೋಪಾಸನೆಯಲ್ಲಿ ಒಂದು

ದಾವಣಗೆರೆ, ಮಾ. 2 - ಸೌಂದರ್ಯೋಪಾಸನೆ ಮನುಷ್ಯನ ಮೂಲ ಗುಣಗಳಲ್ಲಿ ಒಂದು, ಅವನ ಕ್ರಿಯಾ ಶೀಲತೆಯಿಂದ ಕಲೆಗಳು ಅರಳಿವೆ, ಚಿತ್ರ ಕಲೆಯೂ ಸೌಂದರ್ಯೋಪಾಸನೆಯಲ್ಲಿ ಒಂದಾಗಿದೆ ಎಂದು ಜನಪದ ತಜ್ಞ ಡಾ. ಎಂ.ಜಿ.ಈಶ್ವರಪ್ಪ ಹೇಳಿದರು.

ದಾವಣಗೆರೆ ಚಿತ್ರಕಲಾ ಪರಿಷತ್‌ನಿಂದ ನಗರದ ಎವಿಕೆ ಕಾಲೇಜು ರಸ್ತೆಯಲ್ಲಿ ನಾಳೆ ಭಾನುವಾರ ಆಯೋಜಿಸಿರುವ ಚಿತ್ರಸಂತೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಶನಿವಾರ ಬೆಳಗ್ಗೆ ನಡೆದ ಹಂದರಕಂಬ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.




ಚಿತ್ರಕಲೆ, ಕ್ರಿಯಾಶೀಲತೆ ಮತ್ತು ಜೀವಂತಿಕೆಯ ಸಂಕೇತ. ಚಿತ್ರಕಲೆಯನ್ನು ನೋಡುವುದರಿಂದ ಮನಸ್ಸು ಅರಳುತ್ತದೆ. ಕಲಾವಿದ ತನಗೆ ಸುಂದರವಾಗಿಕಂಡಿದ್ದನ್ನುಚಿತ್ರಕಲೆಯಾಗಿಸುತ್ತಾನೆ. ಆಧುನಿಕ ಮತ್ತು ಅಧುನೀಕೋತ್ತರ ಚಿತ್ರ ಕಲೆಗಳ ಬಗ್ಗೆ ನೋಡುಗರಿಗೆ ಒಂದು ಸಣ್ಣ ವಿವರಣೆ ಬೇಕಾಗುತ್ತದೆ. ಅದನ್ನು ಚಿತ್ರಕಲಾ ಪರಿಷತ್ ಮಾಡಲಿ. ಭಾನುವಾರ ಇಡೀ ದಿನ ಎವಿಕೆ ಕಾಲೇಜು ರಸ್ತೆ ಚಿತ್ರಕಲೆ, ಕಲಾವಿದರಿಂದ ತುಂಬಿರಲಿ, ಚಿತ್ರಕಲೆ ವಿಜೃಂಭಿಸಲಿ, ಹೆಚ್ಚಿನ ಪೇಂಟಿಂಗ್‌ಗಳು ಮಾರಾಟ ಆಗಲಿ ಎಂದು ಆಶಿಸಿದರು.

ದಾವಣಗೆರೆ ಟೆನ್ನಿಸ್ ಕ್ಲಬ್ ಅಧ್ಯಕ್ಷರೂ ಆದ ಹಿರಿಯ ವೈದ್ಯ ಡಾ. ಶ್ರೀಶೈಲ ಬ್ಯಾಡಗಿ, ನಾನೊಬ್ಬ ಕಲಾ ಪೋಷಕ ಎನ್ನುತ್ತಾ, ಇಂಗ್ಲೆಂಡ್ ಹಾಗೂ ಯುರೋಪ್ ಪ್ರವಾಸದಲ್ಲಿ ಕಂಡ ಚಿತ್ರಕಲೆಗಳ ಬಗ್ಗೆ ಮಾತನಾಡಿದರು. 'ಮೊನಾಲಿಸಾಳ ನಗು'ವಿನ ಚಿತ್ರ ಜಗತ್ತಿನ ಎಲ್ಲ ಚಿತ್ರ ಪ್ರೇಮಿಗಳನ್ನು ಸೆಳೆದಿರುವುದರ ಬಗ್ಗೆ ಮಾತನಾಡಿದರು. ಚಿತ್ರಕಲೆ ಬಗ್ಗೆ ನಾವು ಮನಬಂದಂತೆ ಅನಿಸಿಕೆ ಕೊಡಬಹುದು. ಆದರೆ ಚಿತ್ರವನ್ನು ಸೃಷ್ಟಿಸುವ ಕಲಾವಿದನಿಗೆ ಮಾತ್ರ ಒಂದು ಚಿತ್ರ ಬರೆಯುವ ಕಷ್ಟ ಗೊತ್ತಿರುತ್ತದೆ ಎಂದರು. ವೈದ್ಯರು ಸರ್ಜರಿ ಮಾಡುವುದು ಒಂದು ಕಲೆಯೇ, ನಾವು ಕೂಡ ಕಲಾವಿದರೇ, ಇಂದಿನ ಆಧುನಿಕ ಚಿತ್ರಕಲೆಗಳು ಹಲವು ಅರ್ಥಗಳನ್ನು ಹೊಮ್ಮಿಸುತ್ತವೆ, ಈ ಬಗ್ಗೆ ನೋಡುಗ ಜನರಿಗೆ ತಿಳಿಸಬೇಕಾಗುತ್ತದೆ ಎಂದರು.

**ಜನಪದ ತಜ್ಞ ಡಾ. ಎಂ.ಜಿ.ಈಶ್ವರಪ್ಪ**

ನಗರದ ದೃಶ್ಯಕಲಾ ಮಹಾ ವಿದ್ಯಾಲಯದ ಪ್ರಾಚಾರ್ಯ ಜಯರಾಜ ಚಿಕ್ಕಪಾಟೀಲ್, ಚಿತ್ರಕಲಾ ಪರಿಷತ್ ಅಧ್ಯಕ್ಷ ಡಿ.ಸಿ. ಶ್ರೀನಿವಾಸ ಚಿನ್ನಿಕಟ್ಟೆ ಮಾತನಾಡಿದರು.

ಪರಿಷತ್ ಪದಾಧಿಕಾರಿಗಳಾದ ಸದಾನಂದ ಹೆಗಡೆ, ರವಿಶ್ಯಾಮ್ ಹುದ್ದಾರ್, ಶಾಂತಯ್ಯ ಪರಡಿಮಠ್, ವಿಜಯ ಕುಮಾರ್ ಜಾಧವ್, ಎಂ. ಅಶೋಕ್, ಗಣೇಶ್ ಆಚಾರ್, ಅಚ್ಯುತಾನಂದ, ಶಿವಕುಮಾರ್, ಕಾರ್ಯದರ್ಶಿ ಡಿ. ಶೇಷಾಚಲ ಇದ್ದರು.

# ಜೀವನ್ಮರಣ ಹೋರಾಟದಲ್ಲಿದ್ದ ವಿದ್ಯಾರ್ಥಿಗೆ ಆರೈಕೆ ಆಸ್ಪತ್ರೆಯಲ್ಲಿ ಮರು ಜನ್ಮ

ದಾವಣಗೆರೆ, ಮಾ. 2 - ಚಾಕುವಿನಿಂದ ಇರಿತಕ್ಕೊಳಗಾಗಿ ತೀವ್ರ ರಕ್ತ ಸ್ರಾವದಿಂದ ಜೀವನ್ಮರಣ ಹೋರಾಟದಲ್ಲಿದ್ದ ವಿದ್ಯಾರ್ಥಿಯನ್ನು ಪ್ರಾಣಾಪಾಯದಿಂದ ಪಾರು ಮಾಡುವಲ್ಲಿ ನಗರದ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಯಶಸ್ವಿಯಾಗಿದೆ.



**ಏನಿದು ಘಟನೆ ? :** ನಾಯಕನಹಟ್ಟಿ ಬಳಿಯ ಗ್ರಾಮವೊಂದರಲ್ಲಿ ಇಬ್ಬರು ಶಾಲಾ ಬಾಲಕರ ನಡುವಿನ ಕ್ಷುಲ್ಲಕ ಜಗಳವು ಚಾಕು ಇರಿತದಿಂದ ಕೊನೆಗೊಂಡಿತ್ತು. ಹತ್ತನೇ ತರಗತಿ ಓದುತ್ತಿದ್ದ ವಿದ್ಯಾರ್ಥಿಗೆ ಆತನ ಸಹಪಾಠಿಯೊಬ್ಬ ಆಟದ ವೇಳೆ ಮಾತಿಗೆ ಮಾತು ಬೆಳೆದ ಕಾರಣ ಚಾಕುವಿನಿಂದ ಇರಿದಿದ್ದ. ವಿದ್ಯಾರ್ಥಿಯನ್ನು ಆಂಬ್ಯುಲೆನ್ಸ್ ಮೂಲಕ ಸ್ಥಳೀಯ ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಶುಕ್ರವಾರ ತಡರಾತ್ರಿ ದಾಖಲಿಸಲಾಗಿತ್ತು.

**ಸಂಕೀರ್ಣವಾದ ಶಸ್ತ್ರ ಚಿಕಿತ್ಸೆಯಲ್ಲಿ ಯಶಸ್ವಿಯಾದ ಆರೈಕೆ ವೈದ್ಯಕೀಯ ತಂಡ : ಡಾ. ಟಿಜಿಆರ್**

**ವೈದ್ಯರ ಭರವಸೆ:** ತಮ್ಮ ಮಗ ಬದುಕಬಹುದು ಎಂಬ ಭರವಸೆಯೇ ಕಳೆದುಕೊಳ್ಳುತ್ತಿದ್ದ ಪೋಷಕರಿಗೆ, ಆರೈಕೆ ಆಸ್ಪತ್ರೆಯ ಮುಖ್ಯಸ್ಥ ಡಾ. ಟಿ.ಜಿ. ರವಿಕುಮಾರ್ ಅವರು ಧೈರ್ಯ ತುಂಬಿ, ಕೂಡಲೇ ಶಸ್ತ್ರ ಚಿಕಿತ್ಸೆಗೆ ಏರ್ಪಾಡು ಮಾಡಿದ್ದರು. ಡಾ. ಎಸ್. ಶ್ರೀನಿವಾಸ್, ಡಾ. ದೀಪಕ್ ಅವರನ್ನೊಳಗೊಂಡ ವೈದ್ಯರ ತಂಡ, ಸತತ ಮೂರು ತಾಸುಗಳ ಶ್ರಮದಿಂದಾಗಿ ವಿದ್ಯಾರ್ಥಿಯ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿದ್ದು, ಸದ್ಯ ಪ್ರಾಣಾಪಾಯದಿಂದ ವಿದ್ಯಾರ್ಥಿಯು ಪಾರಾಗಿದ್ದಾನೆ ಎಂದು ಆಸ್ಪತ್ರೆಯ ಮೂಲಗಳಿಂದ ತಿಳಿದು ಬಂದಿದೆ.

ಶಸ್ತ್ರ ಚಿಕಿತ್ಸೆ ಯಶಸ್ವಿಗೊಳಿಸಿದ ಡಾ. ಎಸ್. ಶ್ರೀನಿವಾಸ್ ಮಾತನಾಡಿ, ವಿದ್ಯಾರ್ಥಿ ಆರೈಕೆ ಆಸ್ಪತ್ರೆಗೆ ಬರುವಷ್ಟರಲ್ಲೇ ಒಂದು ಲೀಟರ್ ನಷ್ಟು ರಕ್ತ ಕಳೆದುಕೊಂಡು ಚಿಂತಾಜನಕವಾಗಿದ್ದ. ಚಾಕು ಇರಿತದಿಂದ ಜಠರಕ್ಕೆ ತೀವ್ರ ಹಾನಿಯಾಗಿತ್ತು. ರಕ್ತ ಹೆಪ್ಪುಗಟ್ಟಿದ್ದರ ಜತೆಗೆ ರಕ್ತ ದೊತ್ತಡ ಕಡಿಮೆಯಿದ್ದು, ಎದೆ ಬಡಿತ ತೀವ್ರವಾಗಿತ್ತು. ಇದರಿಂದಾಗಿ ಒಂದಷ್ಟು ಸವಾಲುಗಳು ಎದುರಾದರೂ ಚಿಕಿತ್ಸೆ ಯಶಸ್ವಿಯಾಗಿದೆ ಎಂದು ಹೇಳಿದರು.

## ಬರ ನಿರ್ವಹಣೆ : ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಎಸ್ಸೆಸ್ಸೆಂ ಚರ್ಚೆ



ದಾವಣಗೆರೆ, ಮಾ.2- ಬೆಂಗಳೂರಿನ ವಿಧಾನಸೌಧದಲ್ಲಿ ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಬರ ನಿರ್ವಹಣೆ ಹಾಗೂ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಹವಾಮಾನ ಪರಿಸ್ಥಿತಿಯ ವಿದ್ಯಾಮಾನದ ಬಗ್ಗೆ ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಪಾಲ್ಗೊಂಡು ಚರ್ಚಿಸಿದರು.

ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಚಿವರಾದ ಚೆಲುವರಾಯಸ್ವಾಮಿ, ಪ್ರಿಯಾಂಕ ಖರ್ಗೆ ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಪುಟ್ಟರಾಜ ಕವಿ ಗವಾಯಿಗಳ ಜನ್ಮದಿನೋತ್ಸವ



ಜಿಲ್ಲಾ ಮತ್ತು ಮಹಿಳಾ ಘಟಕದಿಂದ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಜನ್ಮದಿನೋತ್ಸವ ಕಾರ್ಯಕ್ರಮವನ್ನು ಪಿ.ಬಿ. ರಸ್ತೆಯಲ್ಲಿರುವ ಶ್ರೀಗಂಧ ರೆಸಿಡೆನ್ಸಿಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಸಂಗೀತ, ನೃತ್ಯ ಕಾರ್ಯ ಕ್ರಮಗಳನ್ನು ಏರ್ಪಡಿಸಿದ್ದು, ಆಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಜಿಲ್ಲಾ ಘಟಕದ ಅಧ್ಯಕ್ಷ ಪಿ.ಬಿ. ವಿನಾಯಕ ಕೋರಿದ್ದಾರೆ.

## 'ಜಿಪಿಟಿ'ಯಲ್ಲಿ ವಿಲೀನಕ್ಕೆ ಪದವಿ ಶಿಕ್ಷಕರ ಆಗ್ರಹ

ಹೊಸದುರ್ಗ, ಮಾ. 2- 2016ಕ್ಕಿಂತ ಮೊದಲು ಪ್ರಾಥಮಿಕ ಶಾಲೆಗೆ ನೇಮಕ ಹೊಂದಿರುವ ಪದವಿ ಪೂರೈಸಿದ ಶಿಕ್ಷಕರನ್ನು ಜಿಪಿಟಿ ಪದನಾಮದಡಿ ವಿಲೀನ ಮಾಡಬೇಕು ಎಂದು ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

2017ರ ಸಿ ಅಂಡ್ ಆರ್ ನಿಯಮಾವಳಿಯನ್ನು 2016 ಕ್ಕಿಂತ ಮುಂಚೆ ನೇಮಕ ಹೊಂದಿದ ಶಿಕ್ಷಕರಿಗೆ ಪೂರ್ವಾನ್ವಯ ಮಾಡಬಾರದು. ಆರ್‌ಟಿಇ, ಎನ್‌ಸಿಟಿಇ ನಿಯಮಗಳನ್ವಯ ಒಂದು ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ವಿದ್ಯಾರ್ಹತೆ ಹೊಂದಿಲ್ಲದಿದ್ದರೆ ಅಂತಹ ಶಿಕ್ಷಕರಿಗೆ ವಿದ್ಯಾರ್ಹತೆ ಗಳಿಸಲು ಅವಕಾಶ ನೀಡಬೇಕು ಎಂದಿರುವಾಗ. ಅದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ, ಅದನ್ನೂ ಮೀರಿ ಈಗಾಗಲೇ ಅರ್ಹತೆ ಹೊಂದಿರುವ ಸೇವಾನಿರತ ಪದವೀಧರ ಶಿಕ್ಷಕರನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ, ಇವರನ್ನು ಜಿಪಿಟಿ ಎಂದು ಪರಿಗಣಿಸದೇ ಪಿಎಸ್‌ಟಿ 1 ರಿಂದ 5 ತರಗತಿ ಎಂದು ಕೆಳಗಿನ ತರಗತಿಗೆ ಸೀಮಿತಗೊಳಿಸಿರುವುದು ಅನ್ಯಾಯವಲ್ಲವೇ?.

20-25 ವರ್ಷಗಳಿಂದ 6ರಿಂದ 8ನೇ ತರಗತಿಗಳಿಗೆ ಬೋಧಿಸುತ್ತಿದ್ದ ಶಿಕ್ಷಕರಿಗೆ ನೀವು 6 ರಿಂದ 8ನೇ ತರಗತಿಗೆ ಬೋಧಿಸಲು ನಿಮಗೆ ಅರ್ಹತೆ ಇಲ್ಲ ಹೋಗಿ 'ನಲಿ-ಕಲಿ'ಗೆ ಎಂದಾಗ ಆದಂತಹ ನೋವು, ಅವಮಾನದಿಂದ ಎಷ್ಟೋ ಶಿಕ್ಷಕರು ಕುಗ್ಗಿ ಹೋಗಿದ್ದಾರೆ ಎಂದು ನೊಂದ ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರು ತಮ್ಮ ಅಳಲು ತೋಡಿಕೊಂಡಿದ್ದಾರೆ. ಸತತ ಒಂದೇ ಹುದ್ದೆಯಲ್ಲಿ ನಿರಂತರ ಸೇವೆ ಸಲ್ಲಿಸಿದವರಿಗೆ ಮುಂಬಡ್ತಿ ನೀಡಬೇಕೆನ್ನುವುದು ನಿಯಮ. ಆದರೆ ಪದನಾಮಕರಣ ಮಾಡಿ ಕೆಳಗಿನ ತರಗತಿಗಳಿಗೆ ಸೀಮಿತಗೊಳಿಸಿದ್ದು ಐತಿಹಾಸಿಕ ಪ್ರಮಾದವಾಗಿದೆ.

**ಸಿ ಅಂಡ್ ಆರ್ ನಿಯಮ ತಿದ್ದುಪಡಿಯಾಗಲಿ**

ಬಿಎ, ಬಿಎಸ್ಸಿ, ಎಂಎ, ಎಂಎಸ್ಸಿ, ಬಿ.ಎಡ್, ಎಂ.ಎಡ್, ಪಿಹೆಚ್‌ಡಿ ವಿದ್ಯಾರ್ಹತೆಗೆ ಬೆಲೆ ಇಲ್ಲವೇ? ಪ್ರಾಥಮಿಕ ಶಾಲೆಗೆ ದೈಹಿಕ ಶಿಕ್ಷಕರಾಗಿ ನೇಮಕವಾದ ಸಿಪಿಎಡ್ ವಿದ್ಯಾರ್ಹತೆ ಹೊಂದಿದವರು ಬಿಪಿಎಡ್ ಮುಗಿಸಿದ್ದರಿಂದ ಅವರಿಗೆ ನೇರವಾಗಿ ಹೈಸ್ಕೂಲ್‌ಗೆ ಬಡ್ತಿ ನೀಡಿದ್ದಾರೆ. ಹಾಗಾದರೆ ಇವರಿಗೆ ಸಿ ಅಂಡ್ ಆರ್ ನಿಯಮ ಅನ್ವಯ ಆಗುವುದಿಲ್ಲವೇ? ನಮಗೇಕೆ ತಾರತಮ್ಯ? ಸಾಮಾಜಿಕ ನ್ಯಾಯದಡಿ ನಮಗೂ ಬಡ್ತಿ ನೀಡಬೇಕು. ಈಗ ಬಿಎ, ಡಿ.ಎಡ್ ಮಾಡಿರುವವರು ಜಿಪಿಟಿ ಶಿಕ್ಷಕರಾಗಿ ನೇಮಕ ಆಗಿದ್ದಾರೆ. ಹಾಗಾದರೆ 20, 25 ವರ್ಷದಿಂದ ಸೇವೆ ಸಲ್ಲಿಸಿ, ಉನ್ನತ ವಿದ್ಯಾಭ್ಯಾಸ ಮಾಡಿರುವ ನಮಗೆ ಬೆಲೆ ಇಲ್ಲವೇ?. ಸಿ ಅಂಡ್ ಆರ್ ರೂಲ್ ಏಕೆ ತಿದ್ದುಪಡಿ ಮಾಡಲು ಸಾಧ್ಯವಿಲ್ಲ ಎಂದು ನೊಂದ ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರು ಪ್ರಶ್ನಿಸಿದ್ದಾರೆ.

## ವೀರೇಶ್ವರ ಪುಣ್ಯಾಶ್ರಮದಲ್ಲಿಂದು ಪುಟ್ಟರಾಜ ಕವಿ ಗವಾಯಿ ಜಯಂತಿ

ಬಾಡಾ ಕ್ರಾಸ್ ಬಳಿ ಇರುವ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಪದ್ಮಭೂಷಣ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ 110 ನೇ ಜಯಂತ್ಯುತ್ಸವ ಹಾಗೂ ಸಂಗೀತ ಕಾರ್ಯಕ್ರಮ, ಧರ್ಮಸಭೆ ಇಂದು ನಡೆಯಲಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಕಲ್ಲಯ್ಯಜ್ಜನವರು ಸಾನ್ನಿಧ್ಯ ವಹಿಸಿದ್ದರು. ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಅಥಣಿ ವೀರಣ್ಣ, ದೇವರಮನಿ ಶಿವಕುಮಾರ್, ಅಣಬೇರು ರಾಜಣ್ಣ, ಎನ್. ವಿ. ಅಂಗಡಿ ಸಾವಿತ್ರಮ್ಮ, ನಾಗರಾಜ್, ಇ.ಎಂ. ಮಂಜುನಾಥ, ರವಿಚಂದ್ರ ಭಾಗವಹಿಸಲಿದ್ದಾರೆ.

## ಎಸ್.ಎಸ್. ಕೇರ್ ಟ್ರಸ್ಟ್‌ನಿಂದ ಆರೋಗ್ಯ ತಪಾಸಣೆ



ದಾವಣಗೆರೆ, ಮಾ. 2- ಇಲ್ಲಿನ ತ್ರಿಶೂಲ್ ಕಲಾಭವನದ ಆವರಣದಲ್ಲಿ ತ್ರಿಶೂಲ್ ಶಾಲೆಯ ಮಕ್ಕಳು ಹಾಗೂ ಪೋಷಕರಿಗೆ ಸಂಚಾರಿ ಆರೋಗ್ಯ ವಾಹನದಲ್ಲಿ ಎಸ್.ಎಸ್. ಕೇರ್ ಟ್ರಸ್ಟ್‌ನಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಸುಮಾರು 200 ಪೋಷಕರು ಹಾಗೂ 105 ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಸಮಾಲೋಚನೆ ನಡೆಸಲಾಯಿತು.

ರಕ್ತದ ಸಕ್ಕರೆ ತಪಾಸಣೆ, ಬಿ.ಪಿ ತಪಾಸಣೆ, ಇ.ಸಿ.ಜಿ ಪರೀಕ್ಷೆ, ನೇತ್ರ ತಪಾಸಣೆ, ಹೃದಯ ತಪಾಸಣೆ ಹಾಗು ನುರಿತ ವೈದ್ಯರಿಂದ ಸಂಪೂರ್ಣ ಆರೋಗ್ಯ ತಪಾಸಣೆ, ಉಚಿತ ಔಷಧಿಯೊಂದಿಗೆ 16 ಜನರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಉಚಿತ ಎಸ್‌ಎಸ್ ಕೇರ್ ಟ್ರಸ್ಟ್ ಕಾರ್ಡ್ ವಿತರಿಸಲಾಯಿತು. 5 ಜನರಿಗೆ ಬಾಪೂಜಿಯ ಮೋದಿ ಆಸ್ಪತ್ರೆಯಲ್ಲಿ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗೆ ಕಾರ್ಡ್ ನೀಡಲಾಯಿತು.

## ನೀರು ಬಳಕೆದಾರರ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ

ದಾವಣಗೆರೆ, ಮಾ. 2 - ಶಿರಮಗೊಂಡನಹಳ್ಳಿ ನೀರು ಬಳಕೆದಾರರ ಸಹಕಾರ ಸಂಘದ ನಿರ್ದೇಶಕರಾಗಿ ಹಲವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದುಳಿದ ಎ ವರ್ಗದ ಸ್ಥಾನಗಳಿಗೆ ಡಿ.ಜಯಪ್ಪ ಕಬ್ಬೇರ್, ಎನ್.ನಾಗರಾಜ್ ಬಾತಿ, ಎಸ್‌ಟಿ ಮೀಸಲಾತಿ ಸ್ಥಾನಗಳಿಗೆ ಶಾರದಮ್ಮ ಗಣೇಶಪ್ಪ, ಮಹಿಳಾ ಮೀಸಲಾತಿ ಎರಡು ಸ್ಥಾನಗಳಿಗೆ ರತ್ನಮ್ಮ ಬಸವರಾಜಪ್ಪ, ಛಾಯಾ ಎ. ಎಚ್. ನಾಗರಾಜ್, ಸಾಮಾನ್ಯ ವರ್ಗದ ಆರು ಸ್ಥಾನಗಳಿಗೆ ಎ.ಬಿ. ಕರಬಸಪ್ಪ, ಎಸ್.ಎ.ಬಸವರಾಜಪ್ಪ, ಎ. ವಸಂತ್‌ಕುಮಾರ್, ಎ.ಬಿ.ಗುರುಶಂಕರ್, ಯು. ರಾಮಚಂದ್ರ, ಜಿ.ಎನ್.ಹಾಲೇಶ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಜಯಲಕ್ಷ್ಮಿ ಘೋಷಣೆ ಮಾಡಿದ್ದಾರೆ. ಸಂಘದ ಕಾರ್ಯದರ್ಶಿ ಎಸ್.ಆರ್.ನಾಗರಾಜ್ ಹಾಗೂ ಇತರರು ಇದ್ದರು.

## ಪಾದಯಾತ್ರಿಗಳಿಗೆ ಪ್ರಸಾದ ವ್ಯವಸ್ಥೆ

ಹರಪನಹಳ್ಳಿ ತಾಲ್ಲೂಕಿನ ಕಂಚಿಕೆರೆ-ಅರಸಿಕೆರೆ ರಸ್ತೆ ಬದಿಯ ಶ್ರೀಕ್ಷೇತ್ರ ಬಿದ್ದ ಹನುಮಪ್ಪನಮಟ್ಟಿ ಶ್ರೀ ವೀರಾಂಜನೇಯ ಮಹಾಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದರ್ಶನಕ್ಕೆ ತೆರಳುವ ಸಮಸ್ತ ಪಾದಯಾತ್ರಿಗಳಿಗೆ ದೇವಸ್ಥಾನ ಸಮಿತಿ ಟ್ರಸ್ಟ್ ಹಾಗೂ ಶ್ರೀ ಬಸವರಾಜ ಗುರೂಜಿ ಇಂದು ಪ್ರಸಾದದ ವ್ಯವಸ್ಥೆ ಮಾಡಿದ್ದಾರೆ.

# ಮಧುರೈನಿಂದ ದೆಹಲಿಗೆ ರಾಜಲಕ್ಷ್ಮಿ ಬೈಕ್ ಜಾಥಾ

### ದಾವಣಗೆರೆಯಲ್ಲಿ ಬಿಜೆಪಿ ಮುಖಂಡರಿಂದ ಸ್ವಾಗತ, ನಗರದಲ್ಲಿ ಬೈಕ್ ಜಾಥಾ ನಡೆಸಿ ಬೀಳ್ಕೊಡುಗೆ



ದಾವಣಗೆರೆ: 'ವೋಟ್ ಫಾರ್ ಮೋದಿ, ವೋಟ್ ಫಾರ್ ನೇಷನ್' ಎಂಬ ಘೋಷವಾಕ್ಯದಡಿ ತಮಿಳುನಾಡಿನ ಮಧುರೈನಿಂದ ದೆಹಲಿ ವರೆಗೆ ಬುಲೆಟ್ ಬೈಕ್ ಮೂಲಕ ಜಾಥಾ ನಡೆಸುತ್ತಿರುವ ಬಿಜೆಪಿ ಮುಖಂಡರಾದ ರಾಜಲಕ್ಷ್ಮಿ ಮಾತಾಜಿ ಅವರ ಜಾಥಾವನ್ನು ಶನಿವಾರ ಬೆಳಿಗ್ಗೆ ನಗರದಿಂದ ಬೀಳ್ಕೊಡಲಾಯಿತು.

ಶುಕ್ರವಾರ ಸಂಜೆ ನಗರ ಪ್ರವೇಶಿಸಿದ್ದ ಈ ಜಾಥಾವನ್ನು ಇಲ್ಲಿನ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಪಕ್ಷದ ಮುಖಂಡರು ಸ್ವಾಗತಿಸಿದರು.

ಶನಿವಾರ ಬೆಳಿಗ್ಗೆ ನಗರದ ರಿಂಗ್ ರಸ್ತೆಯ ಶಂಕರ ಮಠದಿಂದ ಜಾಥಾ ಹೊರಟು, ಸರ್ಕಾರಿ ನೌಕರರ ಭವನ, ರಾಂ ಅಂಡ್ ಕೋ ವೃತ್ತ, ಎವಿಕೆ ಕಾಲೇಜು, ಅಂಬೇಡ್ಕರ್ ವೃತ್ತ, ಹದಡಿ ರಸ್ತೆ ಮೂಲಕ ಶಾಮನೂರು ಬೈಪಾಸ್ ವರೆಗೆ ತೆರಳಿ ಮಾತಾಜಿ ಅವರ ಜಾಥಾವನ್ನು ಬೀಳ್ಕೊಡಲಾಯಿತು.

ಇದಕ್ಕೂ ಮುನ್ನ ಮಾಧ್ಯಮದವರೊಂದಿಗೆ ಮಾತನಾಡಿದ ರಾಜಲಕ್ಷ್ಮಿ ಮಾತಾಜಿ, ನಮ್ಮ ತಂಡದಲ್ಲಿ 22 ಮಂದಿ ಇದ್ದಾರೆ. ಈ ಪೈಕಿ ಮೂವರು ಬೈಕ್‌ನಲ್ಲಿ ಪ್ರಯಾಣ ಮಾಡುತ್ತಾರೆ. ಉಳಿದವರು ಇತರೆ ವಾಹನಗಳಲ್ಲಿ ದೇಶದ 15 ರಾಜ್ಯಗಳಲ್ಲಿ ಅಭಿಯಾನ ಹಮ್ಮಿಕೊಂಡಿದ್ದೇವೆ ಎಂದರು.

ಭಾರತ ಬಲಿಷ್ಠವಾಗಲು, ವಿಶ್ವಗುರುವಾಗಲು ಮತ್ತೊಮ್ಮೆ ನರೇಂದ್ರ ಮೋದಿ ಪ್ರಧಾನಿಯಾಗಬೇಕು. ಈ ಉದ್ದೇಶದೊಂದಿಗೆ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮಧುರೈನಿಂದ ಜಾಥಾ ಆರಂಭಿಸಿದ್ದು, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ರಾಜ್ಯದಲ್ಲಿ ಪ್ರವಾಸ ಮುಗಿಸಿ ಈಗ ದಾವಣಗೆರೆಗೆ ಬಂದಿದ್ದೇವೆ ಎಂದು ತಿಳಿಸಿದರು.

ಒಟ್ಟು 21,000 ಕಿ.ಮೀ. ಸಂಚರಿಸಲಿದ್ದು, ಈಗಾಗಲೇ 4,200 ಕಿ.ಮೀ. ಪೂರ್ಣಗೊಳಿಸಲಾಗಿದೆ. 65 ದಿನಗಳ ನಂತರ ನವದೆಹಲಿಯಲ್ಲಿ ಅಭಿಯಾನ ಅಂತ್ಯಗೊಳ್ಳಲಿದೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಮುಖಂಡರಾದ ಶ್ಯಾಮ್, ರಾಜನಹಳ್ಳಿ ಶಿವಕುಮಾರ್, ಪಿ.ಸಿ.ಶ್ರೀನಿವಾಸ, ಶಿವನಗೌಡ ಪಾಟೀಲ್, ಶ್ರೀನಿವಾಸ ದಾಸಕರಿಯಪ್ಪ, ಗುಮ್ಮನೂರು ಶ್ರೀನಿವಾಸ್, ಭಾಗ್ಯ ಪಿಸಾಳೆ, ರೇಣುಕಾ ಕೃಷ್ಣ, ರಾಕೇಶ್, ನಂದಕುಮಾರ್, ಹರೀಶ್ ಶಾಮನೂರು ಇತರರು ಈ ಸಂದರ್ಭದಲ್ಲಿದ್ದರು.

## ಸಚಿವ ಎಸ್ಸೆಸ್ಸೆಂ ಅವರಿಂದ ಕೆ. ಶಿವರಾಂ ಅವರಿಗೆ ಅಂತಿಮ ನಮನ



ದಾವಣಗೆರೆ, ಮಾ.2- ಮೊನ್ನೆ ನಿಧನರಾದ ನಿವೃತ್ತ ಹಿರಿಯ ಐಎಎಸ್ ಅಧಿಕಾರಿ ಮತ್ತು ಚಲನಚಿತ್ರ ನಟ ಕೆ. ಶಿವರಾಂ ಅವರಿಗೆ ಸಂತಾಪ ವ್ಯಕ್ತಪಡಿಸಿರುವ ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್ .ಎಸ್ ಮಲ್ಲಿಕಾರ್ಜುನ್ ಅವರು, ಶಿವರಾಮ್ ಅವರ ನಿವಾಸಕ್ಕೆ ಭೇಟಿ ನೀಡಿ, ಮೃತರ ಪಾರ್ಥಿವ ಶರೀರಕ್ಕೆ ಪುಷ್ಪಾಮಾಲೆ ಅರ್ಪಿಸಿ ಅಂತಿಮ ನಮನ ಸಲ್ಲಿಸಿದರು.

**ಬೇಕಾಗಿದ್ದಾರೆ**

**ಎಸ್.ಎಲ್.ವಿ ಎಂಟರ್‌ಪ್ರೈಸಸ್**

- ಕಂಪ್ಯೂಟರ್ ಡಿಸೈನಿಂಗ್
- ಆಪರೇಟರ್ ಹಾಗೂ
- ಆಫೀಸ್ ಬಾಯ್ ಬೇಕಾಗಿದ್ದಾರೆ.



ಎಸ್.ಎಸ್. ಲೇಔಟ್ 'ಎ' ಬ್ಲಾಕ್, 7ನೇ ಕ್ರಾಸ್, ಶಾರದಾಂಬ ದೇವಸ್ಥಾನದ ಹತ್ತಿರ.

ಮೊ : 96635 63837, 96860 34662

# 82ರ ವಸಂತಕ್ಕೆ 'ಬಿಜೆಪಿ ಸೋಮಣ್ಣ'



ದಾವಣಗೆರೆ ನಗರದಲ್ಲಿ ಬಿಜೆಪಿ ಹುಟ್ಟು ಹಾಕಿದವರಲ್ಲಿ ಒಬ್ಬರಾಗಿ, ಪಕ್ಷದ ಅಭ್ಯುದಯಕ್ಕೆ ಶ್ರಮಿಸಿದ ಹಿರಿಯರು ಹಾಗೂ ಸಾಮಾಜಿಕ ಸೇವಾ ಕಳಕಳಿಯ ವ್ಯಕ್ತಿ ಜೆ. ಸೋಮನಾಥ್ ಅವರು, ಇಂದು 82ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ.

ದಾವಣಗೆರೆಯಲ್ಲಿ ಬಿಜೆಪಿ ಎಂದಾಕ್ಷಣ ಇಂದಿಗೂ ಸೋಮಣ್ಣನವರ ಹೆಸರು ಮುಂಚೂಣಿಯಲ್ಲಿ ಬರುತ್ತದೆ. ಮೂರು ದಶಕಗಳ ಕಾಲ ಪಕ್ಷದಲ್ಲಿ ಗಣನೀಯ ಸೇವೆ ಸಲ್ಲಿಸಿದ ಅವರು 'ಬಿಜೆಪಿ ಸೋಮಣ್ಣ' ಎಂದೇ ಹೆಸರಾಗಿದ್ದಾರೆ.

3-03-1943ರಂದು ಷಡಾಕ್ಷರಯ್ಯ ಮತ್ತು ವೀರಮ್ಮ ದಂಪತಿಯ ಪುತ್ರರಾಗಿ ಜನಿಸಿದ ಸೋಮಣ್ಣ, ಬಿಎಸ್ಸಿ ಪದವೀಧರರು. ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡು ವೃತ್ತಿ ಜೀವನ ಆರಂಭಿಸಿದ ಅವರು, ತಮ್ಮ ಬಾಳ ಸಂಗಾತಿ ಶ್ರೀಮತಿ ಜೆ. ಶಾಂತಮ್ಮ ಅವರೊಂದಿಗೆ ತುಂಬು ಜೀವನ ಸಾಗಿಸಿದ್ದಾರೆ.

ಅನೇಕ ಸಂಘ - ಸಂಸ್ಥೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿ ಕೊಂಡು ಸಾಮಾಜಿಕ ಮತ್ತು ಧಾರ್ಮಿಕ ಸೇವೆ ಸಲ್ಲಿಸುತ್ತಿದ್ದಾರೆ. ಜೆ.ಸಿ. ಅಧ್ಯಕ್ಷರಾಗಿ, ಯೂತ್ಸ್ ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷರಾಗಿ , ಶ್ರೀ ಶಿವಯೋಗೀಶ್ವರ ಭಜನಾ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ವಿವಿಎಫ್‌ಎಸ್ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯ ಬಿಜೆಪಿ ಪರಿಷತ್ ಸದಸ್ಯರಾಗಿ, ನಗರ ಬಿಜೆಪಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಅನ್ಯಾಯ, ಅಕ್ರಮಗಳ ವಿರುದ್ಧ ಸದಾ ಹೋರಾಟದ ಬದುಕನ್ನು ರೂಢಿಸಿಕೊಂಡಿರುವ ಸೋಮಣ್ಣ, ಅನೇಕ ಪ್ರತಿಭಟನೆಗಳ ಸಂದರ್ಭಗಳಲ್ಲಿ ಸೆರೆಮನೆಗೂ ಹೋಗಿ ಬಂದಿದ್ದಾರೆ. ಗೋಕಾಕ್ ವರದಿ ಜಾರಿಗಾಗಿ ನಡೆದ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ತಮ್ಮ ಈ ಇಳಿಯ ವಯಸ್ಸಿನಲ್ಲೂ ಉತ್ಸಾಹದಿಂದ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ.

ನಮ್ಮ ಸುಖ-ದುಃಖಗಳಿಗೆ ನಾವೇ ಜವಾಬ್ದಾರರೇ ವಿನಃ ಮತ್ತಾರೂ ಅಲ್ಲ. ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದು ನಮ್ಮ ಕೈಯ್ಯಲ್ಲಿಯೇ ಇದೆ ಎಂದು ತಮ್ಮ ಅನುಭವದ ಮಾತನ್ನು ಮೆಲುಕು ಹಾಕುವ ಸೋಮಣ್ಣ ಸೋತಾಗ ಕುಗ್ಗಲಿಲ್ಲ, ಗೆಲುವಿನಿಂದ ಹಿಗ್ಗಲಿಲ್ಲ. ಸಮಚಿತ್ತದಿಂದ, ಕ್ರಿಯಾಶೀಲವಾಗಿರುವುದೇ ಅವರ ಆರೋಗ್ಯ-ಭಾಗ್ಯದ ಗುಟ್ಟು ಎಂದರೂ ತಪ್ಪಾಗಲಾರದು. ಅವರು ನೂರ್ಕಾಲ ಸುಖ-ಶಾಂತಿಯಿಂದ ಬಾಳುವಂತಾಗಲಿ ಎಂಬುದೇ ಈ ಶುಭದಿನದ ಹಾರೈಕೆ.

-ಶಿವಕುಮಾರ್

## ಪ್ರೊ.ರಂಗನಾಥ್ ಅವರ 'ಕಗ್ಗತ್ತಲ ಕಾಲ'ಕ್ಕೆ ಕಸಾಪ ಪುಸ್ತಕ ದತ್ತಿ ಪ್ರಶಸ್ತಿ



ದಾವಣಗೆರೆ, ಮಾ.2- ನಿವೃತ್ತ ಪ್ರಾಂಶುಪಾಲರೂ ಆದ ಹಿರಿಯ ಸಾಹಿತಿ ಪ್ರೊ.ಎಸ್.ಬಿ.ರಂಗನಾಥ್ ಅವರು, ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ 2022ನೇ ಸಾಲಿನ ಪುಸ್ತಕ ದತ್ತಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪ್ರೊ. ರಂಗನಾಥ್ ಅವರ ಕೃತಿ 'ಕಗ್ಗತ್ತಲ ಕಾಲ' ಪುಸ್ತಕಕ್ಕೆ ಶ್ರೀಮತಿ ಭಾರತಿ ಮೋಹನ್ ಕೋಟಿ ದತ್ತಿ ಪ್ರಶಸ್ತಿ ದೊರಕಿದೆ.

ಅನಾಳೆ ದಿನಾಂಕ 3ರ ಭಾನುವಾರ ಸಂಜೆ 6 ಗಂಟೆಗೆ ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಶ್ರೀ ಕೃಷ್ಣರಾಜ ಪರಷತ್ತಿನ ಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಒಟ್ಟಾರೆ 51 ಜನ ಸಾಹಿತಿಗಳು ತಮ್ಮ ಪುಸ್ತಕಗಳಿಗೆ ವಿವಿಧ ದತ್ತಿ ಪ್ರಶಸ್ತಿಗಳನ್ನು ಈ ಸಂದರ್ಭದಲ್ಲಿ ಸ್ವೀಕರಿಸಲಿದ್ದಾರೆ.

## ಚೌಕಿಪೇಟೆ ಅಕ್ಕಿ ವರ್ತಕರಿಂದ ಕೊಟ್ಟೂರು ಪಾದಯಾತ್ರಿಗಳಿಗೆ ಹಣ್ಣು, ನೀರು, ಮಜ್ಜಿಗೆ ವಿತರಣೆ



ದಾವಣಗೆರೆ, ಮಾ. 2- ಇಲ್ಲಿನ ಚೌಕಿಪೇಟೆ ಅಕ್ಕಿ ವರ್ತಕರಿಂದ ಶ್ರೀ ಗುರು ಕೊಟ್ಟೂರೇಶ್ವರ ಪಾದಯಾತ್ರೆ ಹೋಗುವ ಭಕ್ತಾದಿಗಳಿಗೆ ಅರಸೀಕೆರೆಯಲ್ಲಿ ಹಣ್ಣು ನೀರು ಮಜ್ಜಿಗೆ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಯಪ್ರಕಾಶ್ ಮಾಗಿ ಹಾಗೂ ಚೌಕಿಪೇಟೆ ಅಕ್ಕಿ ವರ್ತಕರು ಹಾಗೂ ಗುಜರಿ ಲೈನ್ ಅಕ್ಕಿ ನುಚ್ಚು ವರ್ತಕರು ಹಾಗೂ ರೈಸ್ ಬ್ರೋಕರ್‌ಗಳು ಮತ್ತು ಸ್ನೇಹ ಬಳಗದವರು ಉಪಸ್ಥಿತರಿದ್ದರು.

**VISHWAS SUPER SPECIALITY HOSPITAL & VISHWAS LIFE CARE**

**Job Opportunities**

| Requirement | No. of Posts | Qualifications | Desirable Experience |
|---|---|---|---|
| NICU Staff Nurse | 5 | GNM/B.Sc(N) | >3 years experience |
| ICU Staff Nurse | 4 | GNM/B.Sc(N) | >3 years experience |
| Pharmacist / Pharmacy In-Charge | 2 | D-Pharma or B-Pharma | >5 years experience with Pharmacy management responsibility |
| Insurance Coordinator | 2 | Any Degree | Handling insurance cases at hospital for more than 3 years |
| Labor room Nursing Staff | 6 | GNM/B.Sc(N) | >3 years experience in Pre and Post Labor activities. |
| Marketing Executive | 2 | Any Degree | 3 years experience in hospital marketing |
| Dental Chair Side Assistant | 1 | PUC / Degree | Experience in Assisting Dental cases. |
| Receptionists | 2 | Any Degree | Experience in hospital reception |

Interview Dates : 4th to 7th March 2024
Timings : 11 AM to 2 PM and 6 PM to 8 PM

**Venue : Vishwas Life Care Hospital**
#298, Vidyarthi Bhavan Circle, Hadadi Road, Davangere
Contact No.: 758-00-758-66

Note: Candidates should bring their brief CV, One Passport Size Photograph, Educational Certificates, Experience Certificates for interview. Attractive Salary will be offered for most deserving candidates.

